ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂಪನಿ ನಿಯಮಿತ -ವಿರುದ್ದ ಬಿ.ಎನ್. ಅಶ್ವಥಪ್ಪ ಮತ್ತು ಇನ್ನೊಬ್ಬರು

ಸಂಕೀರ್ಣ ಪ್ರಥಮ ಅಪೀಲುಸಂಖ್ಯೆ: 7901/2016 (ಡಬ್ಲ್ಯೂಸಿ), ದಿನಾಂಕ 28 ನೇ ಆಗಸ್ಟ್, 2019

ತೀರ್ಪು

ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:

ಮುಖ್ಯವಾಗಿ 1ನೇ ಎದುರುದಾರ-ಮಾಲೀಕರ ಅಧೀನದಲ್ಲಿ ಮೃತ ಶಿವಶಂಕರ್ ಚಾಲಕನಾಗಿ ಕಾರ್ಯನಿರ್ವಹಿಸುತ್ತಿರಲಿಲ್ಲವೆಂಬ ಕಾರಣದ ಮೇಲೆ ಅಪಘಾತದ ದಿನಾಂಕದಿಂದ ಹಣ ಠೇವಣಿ ಇಡುವವರೆಗೆ ವಾರ್ಷಿಕ ಶೇಕಡಾ 12 ರ ದರದಲ್ಲಿ ಬಡ್ಡಿ ಸಹಿತವಾಗಿ 8,42,000/- ರೂ.ಗಳ ಒಟ್ಟು ಪರಿಹಾರವನ್ನು ನೀಡಿ ನೌಕರರ ಪರಿಹಾರ/ನ್ಯಾಯಾಧಿಕರಣಕ್ಕೆ ಸಲ್ಲಿಸಿದ ಆಯುಕ್ತರ ಕಡತದಲ್ಲಿನ ಇಸಿಎ. ಸಂಖ್ಯೆ.329/2014 ರಲ್ಲಿ ಹೊರಡಿಸಿದದಿನಾಂಕ: 31.05.2016 ರ ತೀರ್ಪು ಮತ್ತು ಐತೀರ್ಪಿನ ವಿರುದ್ದ ಮೇಲ್ಮನವಿದಾರ-ವಿಮಾ ಕಂಪನಿಯು ಪ್ರಸ್ತುತ ಸಂಕೀರ್ಣ ಪ್ರಥಮ ಅಪೀಲನ್ನು ಸಲ್ಲಿಸಿದೆ.

2. ಅನುಕೂಲದ ದೃಷ್ಟಿಯಿಂದ, ಪಕ್ಷಕಾರರನ್ನು ನ್ಯಾಯಾಧಿಕರಣದ ಮುಂದಿನ ಅವರ ಶ್ರೇಣಿಗನುಸಾರವಾಗಿ ಉಲ್ಲೇಖಿಸಲಾಗಿದೆ.

3. ಕ್ಲೇಮುದಾರರ ಮೊಕದ್ದಮೆಯೆಂದರೆ-ಕ್ಲೇಮುದಾರರ ಮಗ ಶಿವಶಂಕರ್ 1 ನೇ ಎದುರುದಾರರ ಅಧೀನದಲ್ಲಿದ್ದು ನಿಯೋಜನೆಯಿಂದ ಮತ್ತು ನಿಯೋಜನೆಯಲ್ಲಿದ್ದಾಗ ಉಂಟಾದ ಅಪಘಾತದಲ್ಲಿ ಮರಣ ಹೊಂದಿದ ಕಾರಣದಿಂದ ಪರಿಹಾರವನ್ನು ಕ್ಲೇಮು ಮಾಡಿ ಇಸಿಎ.ಸಂಖ್ಯೆ: 329/2014 ನ್ನು ಅವರು ಸಲ್ಲಿಸಿದ್ದಾರೆ.ಮೃತ ಶಿವಶ ಂ ಕರ್ ಚಾಲಕನಾಗಿ 1 ನೇ ಎದುರುದಾರರ-ನೆ ಂ ದಣಿಸಂಖ್ಯೆ: ಕೆಎ-53-7571ನ್ನು ಹೊಂದಿರುವ ಸರಕು ಟ್ರಕ್ನ ಮಾಲೀಕರ ಅಧೀನದಲ್ಲಿ ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದನು; ದಿನಾಂಕ: 21.07.2012 ರಂದು ಬೆಳಿಗ್ಗೆ ಸುಮಾರು 02.00 ಗಂಟೆಗೆ, ಸದರಿ ಮೃತ ಶಿವಶಂಕರ್ ಸದರಿ ಟ್ರಕ್‌ಅನ್ನು ಬೆಳಗಾವಿಯಿಂದ ಬೆಂಗಳೂರಿಗೆ ಚಲಾಯಿಸುತ್ತಿದ್ದನು ಮತ್ತು ಆತನು ಹುಬ್ಬಳ್ಳಿ ಧಾರವಾಡ ಬೈಪಾಸ್ ರಸ್ತೆಯಲ್ಲಿ ಮಣಸೂರು ಸೇತುವೆಯ ಹತ್ತಿರ ತಲುಪಿದಾಗ, ನೋಂದಣಿಸಂಖ್ಯೆ: ಆರ್ಜೆ-19-ಜಿಎ -6521 ನ್ನು ಹೊಂದಿದ್ದ ಲಾರಿ ಚಾಲಕನು ಸದರಿ ವಾಹನವನ್ನು ರಭಸವಾಗಿ ಮತ್ತು ನಿರ್ಲಕ್ಷ್ಯದ ರೀತಿಯಲ್ಲಿ ಚಲಾಯಿಸಿದನು ಹಾಗೂ ಸದರಿ ಸರಕು ಟ್ರಕ್ಗೆ ಡಿಕ್ಕಿ ಹೊಡೆದನು; ಸದರಿ ಅಪಘಾತದ ಪರಿಣಾಮವಾಗಿ ಮೃತ ಶಿವಶಂಕರ್ಗೆ ತೀವ್ರ ಗಾಯಗಳಾದವು ಮತ್ತು ಆತನು ಸ್ಥಳದಲ್ಲೇ ಮೃತನಾದನು; ತರುವಾಯ, ಶಿವಶಂಕರನ ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಧಾರವಾಡದ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ನಂತರ, ಸದರಿ ಮೃತ ದೇಹವನ್ನು ಕ್ಲೇಮುದಾರರಿಗೆ ಹಸ್ತಾಂತರಿಸಲಾಯಿತು.ಇದಲ್ಲದೆ ಅವರು, ಮೃತ ಶಿವಶಂಕರನು ಅಪಘಾತಕ್ಕೆ ಮುಂಚೆ ದೃಢಕಾಯನಾಗಿದ್ದನು ಮತ್ತು ಆರೋಗ್ಯವಂತನಾಗಿದ್ದನು ಹಾಗೂ ಅಪಘಾತ ಸಂಭವಿಸಿದ ಸಮಯದಲ್ಲಿ ಆತನು 28 ವರ್ಷ ವಯಸ್ಸಿನವನಾಗಿದ್ದನು ಮತ್ತು 1 ನೇ ಎದುರುದಾರರ ನಿಯೋಜನೆಯ ಅಧೀನದಲ್ಲಿ ನೋಂದಣಿಸಂಖ್ಯೆ: ಕೆಎ-53-7571ನ್ನು ಹೊಂದಿರುವ ಸರಕು ಟ್ರಕ್ನಲ್ಲಿ ಚಾಲಕನಾಗಿ ಕಾರನಿರ್ವಹಿಸುತ್ತಿದ್ದನು; ಆತನು ಮಾಸಿಕ 6,000/- ರೂ.ಗಳ ವೇತನವನ್ನು ಮತ್ತು ದಿನ ಒಂದಕ್ಕೆ 100/- ರೂ.ಗಳ ಬಾಟಾವನ್ನು ಗಳಿಸುತ್ತಿದ್ದನು.ಶಿವಶಂಕರನ ಅನಿರೀಕ್ಷಿತ ಸಾವಿನಿಂದಾಗಿ, ಪೋಷಕರು-ಮುದಾರರು ಸಾಕಷ್ಟು ನೋವು ಅನುಭವಿಸುತ್ತಿದ್ದಾರೆ ಮತ್ತು ಅವರ ಅನ್ನ ಸಂಪಾದಿಸುತ್ತಿದ್ದ ಮಗನನ್ನು ಕಳೆದುಕೊಂಡಿದ್ದಾರೆ ಎಂದು ವಾದಿಸಿದ್ದಾರೆ.ಇದಲ್ಲದೆ ಅವರು, ಅಪಘಾತವು 1 ನೇ ಎದುರುದಾರರ ಅಧೀನದಲ್ಲಿ ನಿಯೋಜನೆಯಲ್ಲಿದ್ದದ್ದರಿಂದ ಮತ್ತು ನಿಯೋಜನೆಯಲ್ಲಿದ್ದಾಗ ಸಂಭವಿಸಿದೆ ಹಾಗೂ 2 ನೇ ಎದುರುದಾರಗಳು ಆರೋಪಿತ ಸರಕು ಟ್ರಕ್ನ ವಿಮಾದಾರರಾಗಿದ್ದಾರೆ ಮತ್ತು ಅಪಘಾತ ಸಂಭವಿಸಿದ ದಿನಾಂಕದಂದು ವಿಮಾ ಪಾಲಿಸಿಯು ಚಾಲ್ತಿಯಲ್ಲಿತ್ತು ಎಂದು ವಾದಿಸಿದ್ದಾರೆ.ಆದ್ದರಿಂದ, ಟ್ರಕ್ನ ಮಾಲೀಕರಾದ 1 ನೇ ಎದುರುದಾರ ಮತ್ತು ವಿಮಾದಾರರಾದ 2 ನೇ ಎದುರುದಾರ ಇವರಿಬ್ಬರೂ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಪರಿಹಾರ ಸಂದಾಯ ಮಾಡಲು

ಹೊಣೆಗಾರರಾಗುತ್ತಾರೆ; ಆದ್ದರಿಂದ, ತಾವು 9,53,000/- ರೂ.ಗಳ ಪರಿಹಾರವನ್ನು ಬಡ್ಡಿ ಮತ್ತು ವೆಚ್ಚ ಸಹಿತವಾಗಿ ಕೋರಿರುವುದಾಗಿ ವಾದಿಸಿದ್ದಾರೆ.

4. ನೋಟೀಸಿಗೆ ಪ್ರತ್ಯುತ್ತರವಾಗಿ, 1 ನೇ ಎದುರುದಾರ-ಮಾಲೀಕರು ಆಕ್ಷೇಪಣೆಗಳನ್ನು ಸಲ್ಲಿಸಿ, ವೆಂಕಟೇಶ್ ಎಂಬುವವರ ಬಳಿ ಮೃತ ಶಿವಶಂಕರ್ ಟ್ರಕ್ ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದನೆಂದು, ಅವರು ಟ್ರಕ್ನ ಮೊದಲಿನ ಮಾಲೀಕರಾಗಿದ್ದು, ಸದರಿ ವಾಹನವನ್ನು 1 ನೇ ಎದುರುದಾರನು ಖರೀದಿಸಿದ ನಂತರ ಮೃತನು ನಿರುದ್ಯೋಗಿಯಾಗಿದ್ದನೆಂದು ವಾದಿಸಿದ್ದಾರೆ. ಇದಲ್ಲದೆ, ಮೃತನು ಟ್ರಕ್‌ಅನ್ನು ತನ್ನಿಂದ ಬಾಡಿಗೆ ಆಧಾರದ ಮೇಲೆ ತೆಗೆದುಕೊಳ್ಳುತ್ತಿದ್ದನು, ಹಾಗಾಗಿ ಆತನು ತನ್ನ ಅಧೀನದಲ್ಲಿ ನೌಕರನಾಗಿರಲಿಲ್ಲವೆಂದು ಮತ್ತು ಕ್ಲೇಮು ಅರ್ಜಿಯು ಊರ್ಜಿತಯೋಗ್ಯವಾಗಿಲ್ಲವೆಂದು ವಾದಿಸಿದ್ದಾರೆ.ಇದಲ್ಲದೆ, 1 ನೇ ಎದುರುದಾರ ಟ್ರಕ್ ಮಾಲೀಕರು ಘಟನೆ ನಡೆದಿರುವುದನ್ನು ಮತ್ತು ಮೃತ ಶಿವಶಂಕರ್‌ನ ಮರಣದ ಕಾರಣವನ್ನು ಒಪ್ಪಿಕೊಂಡಿದ್ದಾರೆ.ಅಪಘಾತ ಸಂಭವಿಸಿದ ಮಾಹಿತಿಯನ್ನು ಪಡೆದ ನಂತರ, ಕೂಡಲೇ ಅದನ್ನು ತಾನು 2 ನೇ ಎದುರುದಾರ-ವಿಮಾದಾರಿಗೆ ತಿಳಿಸಿರುವುದಾಗಿ ಸಹ ವಾದಿಸಿದ್ದಾರೆ.ನೋಂದಣಿಸಂಖ್ಯೆ: ಕೆಎ-53-7571ನ್ನು ಹೊಂದಿರುವ ಸರಕು ಟ್ರಕ್ನ ಮಾಲೀಕ ತಾನೆಂಬುದನ್ನು ಮತ್ತು ಸದರಿ ವಾಹನವನ್ನು 2 ನೇ ಎದುರುದಾರ ವಿಮಾದಾರರಲ್ಲಿ ವಿಮೆಗೆ ಒಳಪಡಿಸಲಾಗಿತ್ತೆಂಬುದನ್ನು ಹಾಗೂ ಅಪಘಾತದ ದಿನಾಂಕದಂದು ವಿಮಾ ಪಾಲಿಸಿಯು ಜಾರಿಯಲ್ಲಿತ್ತೆಂಬುದನ್ನು ಒಪ್ಪಿಕೊಂಡಿದ್ದಾರೆ.ಆದುದರಿಂದ, ಕ್ಲೇಮು ಅರ್ಜಿಯನ್ನು ವಜಾಗೊಳಿಸಬೇಕೆಂದು ಅವರು ಕೋರಿದ್ದಾರೆ.

5. 2 ನೇ ಎದುರುದಾರ-ವಿಮಾ ಕಂಪನಿಯು ಕ್ಲೇಮು ಅರ್ಜಿಯಲ್ಲಿ ಮಾಡಿದ ವಾದಗಳನ್ನು ಅಲ್ಲಗಳೆದು ಆಕ್ಷೇಪಣೆಗಳನ್ನು ಸಲ್ಲಿಸಿದ್ದು, ಅಪಘಾತವು ನೋಂದಣಿಸಂಖ್ಯೆ: ಆರ್ಜೆ-19-ಜಿಎ -6521 ನ್ನು ಹೊಂದಿರುವ ಲಾರಿಯ ಚಾಲಕನ ರಭಸದ ಮತ್ತು ನಿರ್ಲಕ್ಷ್ಯದ ಚಾಲನೆಯಿಂದಾಗಿ ಸಂಭವಿಸಿದೆಯೆಂದು, ಕ್ಲೇಮುದಾರರು ಸದರಿ ವಾಹನದ ಮಾಲೀಕ ಮತ್ತು ವಿಮಾದಾರರ ವಿರುದ್ಧ ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದಾರೆಂದು ವಾದಿಸಿದ್ದಾರೆ.ಇದಲ್ಲದೆ, ಸರಕು ಟ್ರಕ್ನ ಮಾಲೀಕರು ಚಿಕ್ಕಬಳ್ಳಾಪುರ ಜಿಲ್ಲೆಯ ನಿವಾಸಿಯಾಗಿದ್ದು, ಅರ್ಜಿದಾರರು ಸಹ ಚಿಕ್ಕಬಳ್ಳಾಪುರ ಜಿಲ್ಲೆಯ ನಿವಾಸಿಗಳಾಗಿರುವರು; ಆದುದರಿಂದ, ಅರ್ಜಿಯನ್ನು ವಿಚಾರಣೆ ಮಾಡುವ ಅಧಿಕಾರವನ್ನು ನ್ಯಾಯಾಲಯವು ಹೊಂದಿಲ್ಲವೆಂದು; ಆದಾಗ್ಯೂ, ಟ್ರಕ್ನ ವಿಮಾ ಪಾಲಿಸಿ ಮತ್ತು ಹೊಣೆಗಾರಿಕೆಯು, ಪಾಲಿಸಿಯಲ್ಲಿ ಹೇಳಿದ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿದೆ ಎಂದು ವಾದಿಸಲಾಗಿದೆ.ಮೃತನ ವಯಸ್ಸು, ಉದ್ಯೋಗ ಮತ್ತು ಆದಾಯವನ್ನು ಹಾಗೂ ಮೃತನೊಂದಿಗೆ ಕ್ಲೇಮುದಾರರ ಸಂಬಂಧವನ್ನು ಸಹ ವಿಮಾದಾರರು ಅಲ್ಲಗಳೆದಿದ್ದಾರೆ.ಮೃತ ಶಿವಶಂಕರ್ ಮತ್ತು 1 ನೇ ಎದುರುದಾರ ನಡುವೆ ನೌಕರ ಮತ್ತು ನಿಯೋಜಕ ಸಂಬಂಧವಿಲ್ಲವೆಂದು ಸಹ ವಿಮಾದಾರರು ವಾದಿಸಿದ್ದಾರೆ.ಆದ್ದರಿಂದ, ಕ್ಲೇಮು ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿದ್ದಾರೆ.

6. ಮೊಕದ್ದಮೆಯನ್ನು ಸಾಬೀತುಪಡಿಸುವ ಸಲುವಾಗಿ, 1 ನೇ ಕ್ಲೇಮುದಾರರು ಪಿಡಬ್ಲ್ಯು -1 ಆಗಿ ಸ್ವತಃ ವಿಚಾರಣೆಗೆ ಒಳಗಾಗಿದ್ದಾರೆ ಮತ್ತು ನಿಶಾನೆ ಪಿ .1 ರಿಂದ ಪಿ .7 ರವರೆಗಿನ ದಸ್ತಾವೇಜುಗಳನ್ನು ಗುರುತಿಸಿದ್ದಾರೆ.ಇನ್ನೊಂದೆಡೆ, 1 ನೇ ಎದುರುದಾರ-ಟ್ರಕ್ ಮಾಲೀಕರು ಆರ್ಡಬ್ಲ್ಯು.ಆಗಿ ಸ್ವತಃ ವಿಚಾರಣೆಗೆ ಒಳಗಾಗಿದ್ದಾರೆ ಮತ್ತು ನಿಶಾನೆ ಆರ್ -1 ರಿಂದ ಆರ್ -8 ರವರೆಗಿನ ದಸ್ತಾವೇಜುಗಳನ್ನು ಗುರುತಿಸಿದ್ದಾರೆ ಹಾಗೂ ವಿಮಾ ಕಂಪನಿಯ ಒಬ್ಬ ಅಧಿಕಾರಿಯನ್ನು ಆರ್ಡಬ್ಲ್ಯು.ಆಗಿ ವಿಚಾರಿಸಲಾಗಿದ್ದು ಅವರು ಯಾವುದೇ ದಸ್ತಾವೇಜುಗಳನ್ನು ತಮ್ಮ ಪರವಾಗಿ ಗುರುತಿಸಿರುವುದಿಲ್ಲ.

7. ವಾದಗಳನ್ನಾಧರಿಸಿ, ನ್ಯಾಯಾಧಿಕರಣವು ಈ ಮುಂದಿನ ವಿವಾದಗಳನ್ನು ರೂಪಿಸಿದೆ:

1. ಅರ್ಜಿದಾರರು, ಅರ್ಜಿಯ ಕಂಡಿಕೆ 3 ರಲ್ಲಿ ಕಾಣಿಸಿದಂತೆ,ದಿನಾಂಕ: 21-07-2012ರ ಬೆಳಗಿನ 9 ಗಂಟೆ ವೇಳೆಯಲ್ಲಿ ಶಿವಶಂಕರ್ ಜಿ.ಎ. ಇವರು 1 ನೇ ಎದುರುದಾರರ ಮಾಲೀಕತ್ವದ ಗೂಡ್ಸ್ ಟ್ರಕ್ ನೋಂದಣಿ ಸಂಖ್ಯೆ ಕೆಎ-53-7571 ವಾಹನದಲ್ಲಿ ಚಾಲಕನೆಂದು ಕೆಲಸ ನಿರ್ವಹಿಸುತ್ತಾ ಅಪಘಾತಕ್ಕೆ ಒಳಗಾಗಿ ತೀವ್ರ ಸ್ವರೂಪದಲ್ಲಿ ಗಾಯಗೊಂಡು, ಮೃತಪಟ್ಟರೆಂದು ಸಾಬೀತುಪಡಿಸುವರೇ?

2. ಅರ್ಜಿದಾರರು, ತಾವು ಮೃತ ಶಿವಶಂಕರ್ ಜಿ.ಎ. ಇವನ ವಾರಸುದಾರರು ಮತ್ತು ಬಿತರೆ ಂ ದು ಸಾಬೀತುಪಡಿಸುವರೇ?

3. ಅರ್ಜಿದಾರರು, ಅರ್ಜಿಯಲ್ಲಿ ಕೋರಿರುವಂತೆ ಪರಿಹಾರ ಪಡೆಯಲು ಅರ್ಹರೇ ಆಗಿದ್ದಲ್ಲಿ, ಎಷ್ಟು ಮತ್ತು ಯಾರಿಂದ?

4. ಆದೇಶವೇನು?

8. ಮೌಖಿಕ ಮತ್ತು ದಾಖಲೆಯಲ್ಲಿನ ದಸ್ತಾವೇಜೀಯ ಸಾಕ್ಷ್ಯಗಳನ್ನು ಪರಿಗಣಿಸಿದ ನಂತರ ನ್ಯಾಯಾಧಿಕರಣವು, ನೋಂದಣಿ ಸಂಖ್ಯೆ, ಕೆಎ-53-7571 ಹೊಂದಿರುವ ಸರಕು ಟ್ರಕ್ನಲ್ಲಿ ಮೃತ ಶಿವಶಂಕರ್ ಚಾಲಕನಾಗಿ 1 ನೇ ಎದುರುದಾರನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದನು ಮತ್ತು ನಿಯೋಜನೆಯಿಂದ ಮತ್ತು ನಿಯೋಜನೆಯಲ್ಲಿದ್ದಾಗ ಸಂಭವಿಸಿದ ರಸ್ತೆ ಸಂಚಾರ ಅಪಘಾತದಲ್ಲಿ ಮೃತನಾದನು ಎಂಬುದನ್ನು ಕ್ಲೇಮುದಾರರು ಸಾಬೀತುಪಡಿಸಿದ್ದಾರೆ ಎಂದು ಹಾಗೂ ಕ್ಲೇಮುದಾರರು ಮೃತನ ಅವಲಂಬಿತರು ಎಂಬುದನ್ನು ಅವರು ಸಾಬೀತುಪಡಿಸಿದ್ದಾರೆ ಎಂದು ನಿರ್ಣಯಗಳನ್ನು ದಾಖಲಿಸಿದೆ.ತದನುಸಾರವಾಗಿ, ನ್ಯಾಯಾಧಿಕರಣವು,ದಿನಾಂಕ: 31.05.2016 ರ ಅದರ ಪ್ರಶ್ನಿತ ತೀರ್ಪು ಮತ್ತು ಐತೀರ್ಪಿನ ಮೂಲಕ ಅಪಘಾತ ಸಂಭವಿಸಿದ ದಿನಾಂಕದಿಂದ ಹಣ ಠೇವಣಿ ಇಡುವವರೆಗೆ ವಾರ್ಷಿಕ ಶೇಕಡಾ 12 ರ ದರದಲ್ಲಿ ಬಡ್ಡಿ ಸಹಿತವಾಗಿ 8,42,000/- ರೂ.ಗಳ ಒಟ್ಟು ಪರಿಹಾರವನ್ನು G ನೀಡಿದೆ.ಇದರಿಂದ ಬಾಧಿತರಾಗಿ, ವಿಮಾ ಕಂಪನಿಯು ಮುಖ್ಯವಾಗಿ ಹೊಣೆಗಾರಿಕೆಯನ್ನು ವಿಮಾ ಕಂಪನಿಯ ಮೇಲೆ ಹೊರಿಸಲಾಗಿದೆ ಎಂಬ ಕಾರಣದ ಮೇಲೆ ಪ್ರಸ್ತುತ ಮೇಲ್ಮನವಿಯನ್ನು ಸಲ್ಲಿಸಿದೆ.

9. ಎದುರುದಾರರು-ಕ್ಲೇಮುದಾರರು ಪರಿಹಾರವನ್ನು ಹೆಚ್ಚಿಸುವಂತೆ ಕೋರಿ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

10. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ದಾವೆಗೆ ಸಂಬಂಧಿಸಿದ ಪಕ್ಷಕಾರರ ವಾದಗಳನ್ನು ನಾನು ಆಲಿಸಿದ್ದೇನೆ.

11. ಮೇಲ್ಮನವಿದಾರ-ವಿಮಾ ಕಂಪನಿ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಕೃಷ್ಣ ಕಿಶೋರ್ ಅವರು, ಅಪಘಾತ ಸಂಭವಿಸಿದ ದಿನಾಂಕದಿಂದ ವಾರ್ಷಿಕ ಶೇಕಡಾ 12 ರ ದರದ ಬಡ್ಡಿ ಸಹಿತ 8,42,000/- ರೂ.ಗಳ ಪರಿಹಾರವನ್ನು ನೀಡಿ ನ್ಯಾಯಾಧಿಕರಣವು ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಹೊರಡಿಸಿರುವುದಕ್ಕೆ ಯಾವುದೇ ಆಧಾರವಿಲ್ಲವೆಂದು ಮತ್ತು ಅದು ತಳ್ಳಿಹಾಕಲು ಯೋಗ್ಯವಾಗಿದೆ ಎಂದು ಬಲವಾಗಿ ವಾದಿಸಿದ್ದಾರೆ.ಇದಲ್ಲದೆ, 1 ನೇ ಎದುರುದಾರ-ಮಾಲೀಕ ಮತ್ತು ಮೃತನ ನಡುವಿನ ನೌಕರ ಮತ್ತು ನಿಯೋಜಕನ ಸಂಬಂಧವನ್ನು ಕ್ಲೇಮುದಾರರು ಸಾಬೀತುಪಡಿಸದೇ ಇರುವಾಗ, ಪರಿಹಾರವನ್ನು ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ಮತ್ತು ಪ್ರಶ್ನಿತ ತೀರ್ಪಿನಲ್ಲಿ ನ್ಯಾಯಾಧಿಕರಣವು ಸದರಿ ಸಂಗತಿಯನ್ನು ಪರಿಗಣಿಸಿರುವುದಿಲ್ಲವೆಂದು ಅವರು ವಾದಿಸಿದ್ದಾರೆ.ಇದಲ್ಲದೆ ಅವರು, ಮೇಲ್ಮನವಿದಾರ-ವಿಮಾ ಕಂಪನಿಯು, ಅಪಘಾತ ಸಂಭವಿಸಿದ ದಿನಾಂಕದಂದು ಮೃತ ಶಿವಶ ಂ ಕರ್ 1 ನೇ ಎದುರುದಾರ-ಮಾಲೀಕರ ಅಧೀನದಲ್ಲಿ ಕಾರನಿರ್ವಹಿಸುತ್ತಿರಲಿಲ್ಲ ಮತ್ತು ಅಪಘಾತವು ಆತನ ನಿಯೋಜನೆಯಿಂದ ಮತ್ತು ನಿಯೋಜನೆಯಲ್ಲಿರುವಾಗ ಸಂಭವಿಸಿರುವುದಿಲ್ಲ ಎಂಬ ನಿರ್ದಿಷ್ಟ ಪ್ರತಿವಾದ ಮಾಡಿದ್ದಾರೆಂದು; ಆದುದರಿಂದ, ಮೃತನು ನಿಯೋಜನೆಯಿಂದ ಮತ್ತು ನಿಯೋಜನೆಯಲ್ಲಿರುವಾಗ ಸಂಭವಿಸಿದ ಅಪಘಾತದ ಕಾರಣದಿಂದಾಗಿ ಮರಣ ಹೊಂದಿದ್ದಾನೆಂದು ನ್ಯಾಯಾಧಿಕರಣವು ದಾಖಲಿಸಿದ ನಿರ್ಣಯವು ಆಧಾರರಹಿತವಾಗಿದೆ ಎಂದು ವಾದಿಸಿದ್ದಾರೆ.ಇದಲ್ಲದೆ, ಮಾಲೀಕ-ಆರ್ಡಬ್ಲ್ಯು.ನ್ಯಾಯಾಧಿಕರಣದ ಮುಂದೆ ಆಕ್ಷೇಪಣೆಗಳನ್ನು ಸಲ್ಲಿಸಿದ್ದು, ಮೃತನು ತನ್ನ ಅಧೀನದಲ್ಲಿ ನಿಯೋಜಿತನಾಗಿರಲಿಲ್ಲವೆಂದು ಹೇಳಿದ್ದಾರೆ; ಮೃತನು ತನ್ನಿಂದ ಅಗತ್ಯವಿದ್ದಾಗಲೆಲ್ಲಾ ವಾಹನ ತೆಗೆದುಕೊಂಡು ಹೋಗುತ್ತಿದ್ದನು ಎಂದು ಆರ್.ಡಬ್ಲ್ಯು ಇವರ ಪಾಟಿ-ಸವಾಲಿನಲ್ಲಿನ ಒಂದು ಹೇಳಿಕೆ ಮಾತ್ರವೇ ಪರಿಹಾರ ನೀಡಲು ಆಧಾರವಾಗುವುದಿಲ್ಲವೆಂದು ಅವರು ವಾದಿಸಿದ್ದಾರೆ.ಆದುದರಿಂದ, ನ್ಯಾಯಾಧಿಕರಣವು ನೀಡಿದ ಪ್ರಶ್ನಿತ ತೀರ್ಪ ಮತ್ತು ಐತೀರ್ಪನ್ನು ತಳ್ಳಿಹಾಕಬೇಕೆಂದು ಅವರು ಕೋರಿದ್ದಾರೆ.

12. ಮೇಲ್ಮನವಿದಾರರ ಪರ ಮಾನ್ಯ ನ್ಯಾಯವಾದಿಗಳು, ಅವರ ವಾದಗಳಿಗೆ ಬೆಂಬಲವಾಗಿ, ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದ್ದಾರೆ:

1. ಮಖನ್ನಾನ್ ಮೆಕೆಂಜೀ ಅಂಡ್ ಕಂಪನಿ (ಪ್ರೈ) ಅಮಿಟೆಡ್ -ವಿರುದ್ಧ ಇಬ್ರಾಹಿಂ ಮಹಮ್ಮದ್ ಐಸಾಕ್ – (1969) 2 ಎಸ್.ಸಿ.ಸಿ. 607, (ಕಂಡಿಕೆ 5 ಮತ್ತು 6);

2. ಗೊಟ್ಟುಮುಕ್ಕಾಳ ಅಪ್ಪಲ ನರಸಿಂಹ ರಾಜು ಮತ್ತು ಇತರರು -ವಿರುದ್ಧ ನ್ಯಾಷನಲ್ ಇನ್ಸುರನ್ಸ್ ಕಂಪನಿ ಅಮಿಟೆಡ್ ಮತ್ತು ಇನ್ನೊಬ್ಬರು - (2007) 13 ಎಸ್ಸಿಸಿ 446, (ಕಂಡಿಕೆಗಳು 12, 14 ಮತ್ತು 16).

13. ಇದಕ್ಕೆ ತದ್ವಿರುದ್ಧವಾಗಿ, ಪ್ರಸ್ತುತ 1 ನೇ ಮತ್ತು 2 ನೇ ಎದುರುದಾರರ ಕ್ಲೇಮುದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಮಹೇಶ್ ಶೆಟ್ಟಿಯವರು, ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಸಮರ್ಥಿಸಲು ಕೋರಿದ್ದಾರೆ ಮತ್ತು ವಾಹನದ ಮಾಲೀಕ ಎಂದರೆ ಆರ್ಡಬ್ಲ್ಯು .1, 2009 ನೇ ಸಾಲಿನಲ್ಲಿ ಅಪಘಾತಕ್ಕೀಡಾಗಿದ್ದರೆಂದು ಮತ್ತು ಆ ತರುವಾಯ ಅವರು ವಾಹನ ಚಲಾಯಿಸುವುದನ್ನು ನಿಲ್ಲಿಸಿ, ಚಾಲಕನನ್ನು ನೇಮಕ ಮಾಡಿಕೊಂಡರೆಂದು ಹಾಗೂ ಆರೋಪಿಸಲಾದ ಅಪಘಾತ ಸಂಭವಿಸಿದ ದಿನಾಂಕದಂದು, ಮೃತ ಶಿವಕುಮಾರ್ ತನಗೆ ಸೇರಿದ ಟ್ರಕ್ನಲ್ಲಿ ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದನು ಎಂಬುದನ್ನು ಒಪ್ಪಿಕೊಂಡಿದ್ದಾರೆ ಎಂದು; ಆರ್ಡಬ್ಲ್ಯು.ನೇರವಾಗಿ ಒಪ್ಪಿಕೊಂಡ ಮತ್ತು ಅಧಿನಿಯಮದ 3 ನೇ ಪ್ರಕರಣದ ಉಪಬಂಧಗಳನ್ನು ಪರಿಗಣನೆಗೆ ತೆಗೆದುಕೊಂಡ ಹಿನ್ನೆಲೆಯಲ್ಲಿ, ನ್ಯಾಯಾಧಿಕರಣವು ಪರಿಹಾರ ನೀಡಿರುವುದು ಸರಿಯಾಗಿಯೇ ಇದೆ ಎಂಬುದನ್ನು ಪಾಟಿ-ಸವಾಲಿನಲ್ಲಿ ಅವರು ಒಪ್ಪಿಕೊಂಡಿದ್ದಾರೆ ಎಂದು ವಾದಿಸಿದ್ದಾರೆ.ಆದುದರಿಂದ, ಮೇಲ್ಮನವಿಯನ್ನು ವಜಾ ಮಾಡಲು ಅವರು ಕೋರಿದ್ದಾರೆ.

14. ಪ್ರಸ್ತುತ 1 ನೇ ಮತ್ತು 2 ನೇ ಎದುರುದಾರ ಪರ ಮಾನ್ಯ ನ್ಯಾಯವಾದಿಗಳು ತಮ್ಮ ವಾದಗಳ ಸಮರ್ಥನೆಗೆ ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದ್ದಾರೆ:

1. ನಾಮ್ದೇವ್ -ವಿರುದ್ಧ ಭರತ್ ಮತ್ತು ಇನ್ನೊಬ್ಬರು - 2007 ಎಸಿಜೆ 316, (ಕಂಡಿಕೆ 7);

2. ವಿಭಾಗೀಯ ಅಭಿಯಂತರರು, ದೂರ ಸಂಪರ್ಕ, ಪಲಸ, ಶ್ರೀಕಾಕುಳಂ - ಎಲ್ಎಬ್ಲ್ಯುಎಸ್ (ಎಪಿಹೆಚ್) (1998) 66 (ಕಂಡಿಕೆ 6).

15. ಪ್ರಸ್ತುತ 3 ನೇ ಎದುರುದಾರ-ಮಾಲೀಕರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಕಾರ್ತಿಕ್ ಬಿ. ವೈ. ಅವರು, ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಸಮರ್ಥಿಸಲು ಕೋರಿ, 3 ನೇ ಎದುರುದಾರ ಮಾಲೀಕರು, ತನ್ನ ಅಧೀನದಲ್ಲಿ ಮೃತ ಶಿವಶ ೦ ಕರ್ ಚಾಲಕನಾಗಿ ಕಾರನಿರ್ವಹಿಸುತ್ತಿದ್ದನು ಮತ್ತು ತನ್ನ ಬಳಿ ಇದ್ದ ನಿಯೋಜನೆಯಿಂದ ಮತ್ತು 0 ನಿಯೋಜನೆಯಲ್ಲಿರುವಾಗ ಸಂಭವಿಸಿದ ಅಪಘಾತದಲ್ಲಿ ಅಪಘಾತಕ್ಕೀಡಾಗಿರುವನು ಎಂಬುದನ್ನು ಒಪ್ಪಿಕೊಂಡಿದ್ದಾರೆ ಎಂದು ವಾದಿಸಿದ್ದಾರೆ.ಆದುದರಿಂದ, ಮೇಲ್ಮನವಿಯನ್ನು ವಜಾಗೊಳಿಸಬೇಕೆಂದು ಅವರು ಕೋರಿದ್ದಾರೆ.

16. ನಾನು, ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳನ್ನು ತೀವ್ರವಾಗಿ ಪರಿಗಣಿಸಿದ್ದೇನೆ ಮತ್ತು ದಾಖಲೆಯಲ್ಲಿರುವ ಎಲ್ಲಾ ಸಾಕ್ಷ್ಯವನ್ನು ಎಚ್ಚರಿಕೆಯಿಂದ ಅವಲೋಕಿಸಿದ್ದೇನೆ.

17. ಪ್ರಸ್ತುತ 3 ನೇ ಎದುರುದಾರರಿಗೆ ಸೇರಿದ ನೋಂದಣಿಸಂಖ್ಯೆ: ಕೆಎ-53-7571ನ್ನು ಹೊಂದಿರುವ ಸರಕು ಟ್ರಕ್ನಲ್ಲಿ ಮೃತ ಶಿವಶಂಕರ್ ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದು, ಆತನ ನಿಯೋಜನೆಯಿಂದ ಮತ್ತು ನಿಯೋಜನೆಯಲ್ಲಿರುವಾಗ ಅಪಘಾತಕ್ಕೀಡಾಗಿದ್ದಾನೆ ಎಂಬುದು ಕ್ಲೇಮುದಾರರ ನಿರ್ದಿಷ್ಟ ವಾದವಾಗಿದೆ.ಇದಲ್ಲದೆ, ಪ್ರಸ್ತುತ 3 ನೇ ಎದುರುದಾರರು 6,000/- ರೂ.ಗಳ ಮಾಸಿಕ ವೇತನ ಮತ್ತು ಪ್ರತಿ ದಿನ 100/- ರೂ.ಗಳ ಬಾಟಾವನ್ನು ಮೃತನಿಗೆ ಸಂದಾಯ ಮಾಡುತ್ತಿದ್ದರೆಂಬುದು ಕ್ಲೇಮುದಾರರ ವಾದವಾಗಿದೆ.ಪ್ರಸ್ತುತ 3 ನೇ ಎದುರುದಾರ-ವಾಹನದ ಮಾಲೀಕರ ವಾದವೆಂದರೆ, ಟ್ರಕ್ನ ಮೊದಲ ಮಾಲೀಕರಾಗಿದ್ದಂಥ ವೆಂಕಟೇಶ್ ಎಂಬುವವರ ಹತ್ತಿರ ಶಿವಶಂಕರ್ ಟ್ರಕ್ ಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದರು ಮತ್ತು ಸದರಿ ವಾಹನವನ್ನು ಅವರಿಂದ ತಾನು ಖರೀದಿಸಿದ ನಂತರ, ಸದರಿ ಶಿವಶಂಕರ್ ನಿರುದ್ಯೋಗಿಯಾಗಿದ್ದನು ಎಂಬುದಾಗಿದೆ. ಇದಲ್ಲದೆ, ಮೃತ ಶಿವಶಂಕರ್ನ ಮರಣಕ್ಕೆ ಕಾರಣ ಅಪಘಾತ ಎಂಬುದನ್ನು ಅವರು ಒಪ್ಪಿಕೊಂಡಿದ್ದಾರೆ. ಇದನ್ನು ತಾನು ವಿಮಾ ಕಂಪನಿಗೆ ತಿಳಿಸಿದೆನೆಂದು ಸಹ ಅವರು ಒಪ್ಪಿಕೊಂಡಿದ್ದಾರೆ. ನೋಂದಣಿ ಸಂಖ್ಯೆ ಆರ್ಜೆ-19-ಜಿಎ 6521 ನ್ನು ಹೊಂದಿರುವ ಲಾರಿ ಚಾಲಕನ ರಭಸವಾದ ಮತ್ತು ನಿರ್ಲಕ್ಷ್ಯದ ಚಾಲನೆಯಿಂದ ಅಪಘಾತ ಸಂಭವಿಸಿದೆ ಎಂಬುದು ವಿಮಾ ಕಂಪನಿ-ಪ್ರಸ್ತುತ

ಮೇಲ್ಮನವಿದಾರರ ನಿರ್ದಿಷ್ಟ ವಾದವಾಗಿದೆ.ನೋಂದಣಿಸಂಖ್ಯೆ: ಕೆಎ-53-7571ನ್ನು ಹೊಂದಿರುವ ವಾಹನದ ವಿಮಾ ಪಾಲಿಸಿಯನ್ನು ನೀಡಿರುವುದನ್ನು ಹಾಗೂ ಹೊಣೆಗಾರಿಕೆಯು ಪಾಲಿಸಿಯಲ್ಲಿ ಹೇಳಿದ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿದೆ ಎಂಬುದನ್ನು ಸಹ ಮೇಲ್ಮನವಿದಾರರು ಒಪ್ಪಿಕೊಂಡಿದ್ದಾರೆ.ಮೃತ ಮತ್ತು 1 ನೇ ಎದುರುದಾರ-ಮಾಲೀಕರ ನಡುವಿನ ನೌಕರ-ನಿಯೋಜಕನ ಸಂಬಂಧವನ್ನು ಅವರು ಅಲ್ಲಗಳೆದಿದ್ದಾರೆ.

18. ಕೇಮುದಾರ-ಬಿ.ಎನ್.ಅಶ್ವಥಪ್ಪ (ಮೃತನ ತಂದೆ) ತಮ್ಮ ವಾದವನ್ನು ಸಾಬೀತುಪಡಿಸುವ ಸಲುವಾಗಿ, ಸ್ವತಃ ಪಿಡಬ್ಲ್ಯು -1 ಆಗಿ ವಿಚಾರಣೆಗೆ ಒಳಗಾಗಿದ್ದಾರೆ ಮತ್ತು ನಿಶಾನೆ ಪಿ .1 ರಿಂದ ಪಿ .7 ವರೆಗಿನ ಸಾಕ್ಷ್ಯ ಎ ಸಂಬಂಧಿ ದಸ್ತಾವೇಜುಗಳನ್ನು ಹಾಜರುಪಡಿಸಿದ್ದಾರೆ.ನ್ಯಾಯಾಧಿಕರಣದ ಮುಂದೆ 1 ನೇ ಎದುರುದಾರರನ್ನು (ವಾಹನದ ಮಾಲೀಕ) ಆರ್ಡಬ್ಲ್ಯು .1 ಎಂಬುದಾಗಿ ವಿಚಾರಣೆ ಮಾಡಲಾಗಿದೆ ಮತ್ತು ಅವರು ನಿಶಾನೆ ಆರ್ .1 ರಿಂದ ನಿಶಾನೆ ಆರ್8ರವರೆಗಿನ ಸಾಕ್ಷ್ಯ ಸಂಬಂಧಿ ದಸ್ತಾವೇಜುಗಳನ್ನು ಹಾಜರುಪಡಿಸಿದ್ದಾರೆ.ದಾಖಲೆಯಲ್ಲಿರುವ ಎಲ್ಲಾ ಸಾಕ್ಷ್ಯವನ್ನು ಪರಿಗಣಿಸಿ, 1 ನೇ ಎದುರುದಾರ-ನೋಂದಣಿಸಂಖ್ಯೆ: ಕೆಎ-53-7571ನ್ನು ಹೊಂದಿರುವ ಟ್ರಕ್ನ ಮಾಲೀಕರಿಗೆ ಸೇರಿರುವ ಸರಕು ಟ್ರಕ್‌ಅನ್ನು ಮೃತ ಶಿವಶಂಕರ್ನುದಿನಾಂಕ: 21.07.2012 ರಂದು ಬೆಳಿಗ್ಗೆ ಸುಮಾರು 9 ಗಂಟೆಗೆ ಚಾಲನೆ ಮಾಡುತ್ತಿದ್ದನು ಹಾಗೂ ಅಪಘಾತದಲ್ಲಿ ಉಂಟಾದ ತೀವ್ರ ಗಾಯಗಳಿಂದ ಮೃತನಾದನು ಎಂದು ಆಯುಕ್ತರು ನಿರ್ಣಯವನ್ನು ದಾಖಲಿಸಿದ್ದಾರೆ.ಪ್ರಶ್ನಿತ ಅಪಘಾತವು ವಿವಾದವಾಗಿಲ್ಲ.ಅಪಘಾತ ಸಂಭವಿಸಿದ ದಿನಾಂಕದಂದು ಮೃತನು 1 ನೇ ಎದುರುದಾರ-ಮಾಲೀಕರ ಚಾಲಕನಾಗಿ ಕಾರ್ಯನಿರ್ವಹಿಸುತ್ತಿರಲಿಲ್ಲ ಎಂಬುದು ವಿಮಾ ಕಂಪನಿಯು ಎತ್ತಿರುವ ಏಕೈಕ ಪ್ರಶ್ನೆಯಾಗಿದೆ.ಇದನ್ನು ಆಯುಕ್ತರು ಅಲ್ಲಗಳೆದಿದ್ದಾರೆ ಮತ್ತು 18 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದ್ದಾರೆ:

18. ಆ ತರುವಾಯ, ಅರ್ಜಿದಾರರು ಮತ್ತು 2 ನೇ ಎದುರುದಾರರ ಪರ ನ್ಯಾಯವಾದಿಗಳು, ಆರ್ಡಬ್ಲ್ಯು -1 ಇವರನ್ನು ದೀರ್ಘವಾಗಿ ಪಾಟಿ-ಸವಾಲು ಮಾಡಿದ್ದಾರೆ.ಪಾಟಿ-ಸವಾಲಿನಲ್ಲಿ, ಪುಟಸಂಖ್ಯೆ: 6 ರಿಂದ 9 ರವರೆಗೆ ಮತ್ತು 15 ಹಾಗೂ 16 ರಲ್ಲಿ ಆರ್ಡಬ್ಲ್ಯು -1 ಸ್ಪಷ್ಟವಾಗಿ ಈ ಕೆಳಗಿನಂತೆ ಒಪ್ಪಿಕೊಂಡಿದ್ದಾರೆ:

" ನನಗೆ 2009 ನೇ ಸಾಲಿನಲ್ಲಿ ಅಪಘಾತವಾಗಿದ್ದು, ಆ ವೇಳೆಯಿಂದ ನಾನು ವಾಹನ ಚಲಾಯಿಸುವುದನ್ನು ನಿಲ್ಲಿಸಿದೆನು.ನೀವು ಹೊಂದಿದ್ದ ಕ್ಯಾಂಟರ್ ವಾಹನವನ್ನು ನೀವು ಚಲಾಯಿಸದೇ, ಚಾಲಕನನ್ನು ನೇಮಿಸಿಕೊಂಡು, ಆತನ ಕಡೆಯಿಂದ ವಾಹನ ಚಲಾಯಿಸುತ್ತಿದ್ದರೇ ಎಂದು ಕೇಳಲಾಗಿ, ಹೌದು ಎಂದು ಸಾಕ್ಷಿ ಹೇಳುತ್ತಾರೆ. "

" ದಿ:21-07-2012ರಂದು ಶಿವಶಂಕರ್ ಇವರು ನೀವು ಹೊಂದಿದ ಕ್ಯಾಂಟರ್ನಲ್ಲಿ ಚಾಲಕನೆಂದು ಕೆಲಸ ನಿರ್ವಹಿಸುತ್ತಿದ್ದನೆಂದು ಸೂಚಿಸಲಾಗಿ, ಹೌದು, ಆದರೆ ಆತ ಆ ದಿನ ಮಾತ್ರ ಚಾಲಕ ವೃತ್ತಿ ಮಾಡಲು ಬಂದಿದ್ದನೆಂದು ಸಾಕ್ಷಿ ಹೇಳುತ್ತಾರೆ.ಮೇಲೆ ಹೇಳಿದ ದಿನಾಂಕಕ್ಕೂ ಮೊದಲು ಶಿವಶಂಕರ್ ಇವರು 2 ಬಾರಿ ನನ್ನ ಕ್ಯಾಂಟರ್ನಲ್ಲಿ ಚಾಲಕನೆಂದು ಕೆಲಸ ಮಾಡಲು ಬಂದಿದ್ದರು. "

" ಮೃತ ಶಿವಶಂಕರ್ ಇವರು ನನ್ನ ಲಾರಿಗೆ ಚಾಲಕನೆಂದು ಬರದ ಸಮಯದಲ್ಲಿ, ಆತನು ಬೇರೆ ಲಾರಿಗೆ ಚಾಲಕನೆಂದು ಹೋಗುತ್ತಿದ್ದ ಮತ್ತು ಅದರಿಂದ ಆತನಿಗೆ ಸಂಬಳ ಬರುತ್ತಿತ್ತು ಎಂದರೆ ಸರಿ. "

" ನಾನು ನನ್ನ ತಕರಾರಿನಲ್ಲಿ ನನ್ನ ಮತ್ತು ಮೃತ ಶಿವಶಂಕರ್ ಮಧ್ಯೆ ಮಾಲೀಕ ಮತ್ತು ಕಾರ್ಮಿಕ ಸಂಬಂಧ ಇರದ ಬಗ್ಗೆ ಕಾಣಿಸಿದ್ದು, ಆದರೆ ಇತ್ತೀಚೆಗೆ ಅರ್ಜಿದಾರರೊಂದಿಗೆ ಕೂಡಿ, ವಿಮಾ ಕಂಪನಿಯಿಂದ ಹಣ ಪಡೆಯಬೇಕೆನ್ನುವ ಉದ್ದೇಶದಿಂದ ಕೆಲ ಅಂಶಗಳನ್ನು ಸುಳ್ಳು ಹೇಳುತ್ತಿರುವೆನೆಂದರೆ ಸರಿಯಲ್ಲ.

" ಮೃತ ಶಿವಶಂಕರ್ ಇವರು ಯಾವ ದಿನವು ನಿಮ್ಮ ಬಳಿ ಚಾಲಕ ವೃತ್ತಿಯನ್ನು ಮಾಡಿಲ್ಲ ಮತ್ತು ಅವರಿಗೆ ನೀವು ಯಾವ ದಿನವು ವೃತ್ತಿಯ ಬಗ್ಗೆ ಕೂಲಿಯನ್ನು ಪಾವತಿಸದೇ ಇದ್ದರೂ ೧ ಕೂಡ ಮತ್ತು ನಿಮ್ಮ ಮತ್ತು ಶಿವಶಂಕರ್ ಇವರ ಮಧ್ಯೆ ಮಾಲೀಕ ಮತ್ತು ಕಾರ್ಮಿಕ ಸಂಬಂಧ ಉಂಟಾಗಿಲ್ಲವೆಂದು ಸೂಚಿಸಲಾಗಿ, ಅಪಘಾತವಾದ ದಿನದಂದು ಮಾತ್ರ ಆತನು ನನ್ನ ಲಾರಿಯಲ್ಲಿ ಚಾಲಕ ವೃತ್ತಿ ಮಾಡಲು ಬಂದಿದ್ದನೆಂದು ಸಾಕ್ಷಿ ಹೇಳುತ್ತಾರೆ. "

ಮೇಲಿನ ಸಾಕ್ಷ್ಯವನ್ನು ಅವಲೋಕಿಸಲಾಗಿ, ಒಂದು ಹಂತದಲ್ಲಿ 1 ನೇ ಎದುರುದಾರರು ತಮ್ಮ ಮತ್ತು ಮೃತ ಶಿವಶಂಕರ್ ನಡುವಿನ ನೌಕರ ಮತ್ತು ನಿಯೋಜಕನ ಸಂಬಂಧವನ್ನು ಅಲ್ಲಗಳೆದಿದ್ದಾರೆ ಹಾಗೂ ಇನ್ನೊಂದೆಡೆ, ಆರೋಪಿಸಲಾದ ಅಪಘಾತ ಸಂಭವಿಸಿದ ದಿನಾಂಕದಂದು, 1 ನೇ ಎದುರುದಾರರಿಗೆ ಸೇರಿದ ಟ್ರಕ್ನಲ್ಲಿ ಮೃತ ಶಿವಶಂಕರ್ ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದನೆಂದು ತಮ್ಮ ಸಾಕ್ಷ್ಯದಲ್ಲಿ ಅವರು ಸ್ವತಃ ಒಪ್ಪಿಕೊಂಡಿದ್ದಾರೆ ಎಂಬುದು ಕಂಡುಬರುತ್ತದೆ.ಮೇಲಿನ ಸಂಗತಿಗಳನ್ನು ಪರಿಗಣಿಸಲಾಗಿ, ನೇ ಎದುರುದಾರರ ವಾದವು ಸ್ಥಿರವಾಗಿರುವುದಿಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ.

19. ನಿಶಾನೆ ಪಿ 1 ರ ಪ್ರಕಾರ, ಧಾರವಾಡದ ಪೊಲೀಸರು ನೋಂದಣಿಸಂಖ್ಯೆ: ಆರ್ಜೆ-19-ಜಿಎ 6521 ನ್ನು ಹೊಂದಿರುವ ಲಾರಿ ಚಾಲಕನ ಮೇಲೆ ಪ್ರಕರಣ ದಾಖಲಿಸಿರುವುದಿಲ್ಲ ಎಂಬ ಸಂಗತಿಯು ಸಹ ವಿವಾದಕ್ಕೊಳಗಾಗಿಲ್ಲ. ಪ್ರಸ್ತುತ 3 ನೇ ಎದುರುದಾರ-ಅಪಘಾತದ ದಿನಾಂಕದಂದು ಇದ್ದ ಮಾಲೀಕನೊಂದಿಗೆ ಮೃತನು ಕಾರನಿರ್ವಹಿಸುತ್ತಿರಲಿಲ್ಲ ಮತ್ತು ಯಾವುದೇ ಮುಖ್ಯ ದಸ್ತಾವೇಜುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂಬುದು ಮೇಲ್ಮನವಿದಾರರ ಪರ ಮಾನ್ಯ ನ್ಯಾಯವಾದಿಗಳ ವಾದವಾಗಿದೆ.ಆದುದರಿಂದ, ವಿಮಾ ಕಂಪನಿಯು ಪರಿಹಾರ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.ಪ್ರಸ್ತುತ 3 ನೇ ಎದುರುದಾರ ಮಾಲೀಕರ ಅಧೀನದಲ್ಲಿ ಮೃತನು ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದನು ಹಾಗೂ ಮಾಲೀಕರು ಮಾಸಿಕ 6,000/- ರೂ.ಗಳ ವೇತನವನ್ನು 100/- ರೂ.ಗಳ ಬಾಟಾವನ್ನು ನೀಡುತ್ತಿದ್ದರು ಎಂಬುದು ಕ್ಲೇಮುದಾರರ ಹಾಗೂ 3 ನೇ ಎದುರುದಾರರ ವಾದವಾಗಿದೆ.ಪಾಟಿ-ಸವಾಲಿನಲ್ಲಿ, ವಾಹನದ ಮಾಲೀಕರು ಸ್ಪಷ್ಟ ಪದಗಳಲ್ಲಿ ಮೃತನು ತನ್ನ ಅಧೀನದಲ್ಲಿ ಕಾರನಿರ್ವಹಿಸುತ್ತಿದ್ದನು ಮತ್ತು ಮೃತನು ತನ್ನ ನಿಯೋಜನೆಯಿಂದ ಮತ್ತು ನಿಯೋಜನೆಯಲ್ಲಿರುವಾಗ ಸಂಭವಿಸಿದ ಅಪಘಾತದಲ್ಲಿ ಅಪಘಾತದಕ್ಕೀಡಾಗಿರುವನು ಎಂಬುದನ್ನು ಒಪ್ಪಿಕೊಂಡಿದ್ದಾರೆ.ವಾಹನ ಮಾಲೀಕರು ಸ್ಪಷ್ಟವಾಗಿ ಒಪ್ಪಿಕೊಂಡ ಹಿನ್ನೆಲೆಯಲ್ಲಿ, ನೌಕರ ಮತ್ತು ನಿಯೋಜಕ ಸಂಬಂಧವಿರಲಿಲ್ಲವೆಂದು ವಿಮಾ ಕಂಪನಿಯು ವಾದ ಮಾಡಲಾಗುವುದಿಲ್ಲ.ಅಪಘಾತ ಸಂಭವಿಸಿದ ದಿನಾಂಕದಂದು, 3 ನೇ ಎದುರುದಾರರು ಮೇಲ್ಮನವಿದಾರರೊಂದಿಗೆ ವಿಮೆಗೊಳಪಡಿಸಿದ್ದ ನೋಂದಣಿಸಂಖ್ಯೆ: ಕೆಎ 53 7171 ನ್ನು ಹೊಂದಿದ್ದ ವಾಹನವನ್ನು ಮೃತನು ಚಲಾಯಿಸುತ್ತಿದ್ದನು ಮತ್ತು ಪಾಲಿಯು ಚಾಲ್ತಿಯಲ್ಲಿತ್ತು ಎಂಬ ಸಂಗತಿ ಸಹ ವಿವಾದವಾಗಿಲ್ಲ.

20. ನೌಕರರ ಪರಿಹಾರ ಅಧಿನಿಯಮದ ಉದ್ದೇಶವನ್ನು ಜಾಗರೂಕತೆಯಿಂದ ಪರಿಶೀಲಿಸಲಾಗಿ, ಸದರಿ ಅಧಿನಿಯಮವು ಸಾಮಾಜಿಕ ಭದ್ರತೆ ಮತ್ತು ಕಲ್ಯಾಣಕ್ಕೆ ಸಂಬಂಧಿಸಿದ ಶಾಸನವಾಗಿದೆ ಎಂಬುದನ್ನು ಅದು ಸ್ಪಷ್ಟವಾಗಿ ನಿರೂಪಿಸುತ್ತದೆ.ಅದರ ಪ್ರಮುಖ ಉದ್ದೇಶ ಕಾರ್ಮಿಕರನ್ನು ಸಂರಕ್ಷಿಸುವುದಾಗಿರುವುದರಿಂದ, ಕಾರ್ಮಿಕರು ಪರಿಹಾರವನ್ನು ಪಡೆಯಬೇಕೆಂಬ ಸಂಸತ್ತಿನ ಆಲೋಚನೆಯಾಗಿರುವ ಪರಿಹಾರದಿಂದ ಕಾರ್ಮಿಕರನ್ನು ವಂಚಿಸುವ ರೀತಿಯಲ್ಲಿ ಅತ್ಯಂತ ಸಂಕುಚಿತಾರ್ಥದಲ್ಲಿ ಅಧಿನಿಯಮದ ಉಪಬಂಧಗಳನ್ನು ಅರ್ಥೈಸಬಾರದು.ಕಾರ್ಮಿಕನು ತನ್ನ ಕೆಲಸದಲ್ಲಿ ತೊಡಗಿದಾಗ, ಸಂಭವಿಸಬಹುದಾಗಿರುವ ಗಾಯಗಳಿಂದ ಅಥವಾ ಮರಣದಿಂದ ಉಂಟಾಗುವ ನಷ್ಟಕ್ಕೆ ಪ್ರತಿಯಾಗಿ ಕೆಲಸಗಾರನ ನಿಯೋಜಕನನ್ನು ಮತ್ತು ವಿಮಾಕರ್ತನನ್ನು ಹೊಣೆಗಾರರನ್ನಾಗಿಸುವುದು ಶಾಸನಕರ್ತರ ಉದ್ದೇಶವಾಗಿದೆ.

21. ಅಧಿನಿಯಮದ 3 ನೇ ಪ್ರಕರಣದ ಉಪಬಂಧಗಳನ್ನು ಈ ಕೆಳಗಿನಂತೆ ಓದಲಾಗಿದೆ:

3. ನಷ್ಟ ಪರಿಹಾರ ಸಂದಾಯಕ್ಕೆ ನಿಯೋಜಕರ ಹೊಣೆ. ( 1) ಒಬ್ಬ ನೌಕರನಿಗೆ ಕೆಲಸದಿಂದಾಗಿ ಮತ್ತು ಕೆಲಸದ ವೇಳೆಯಲ್ಲಿ D ಅಪಘಾತದಿಂದ ವೈಯಕ್ತಿಕ ಹಾನಿ ಉಂಟಾದರೆ, ಅವನ ನಿಯೋಜಕನು ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ನಷ್ಟ ಪರಿಹಾರವನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು:

ಪರಂತು, ನಿಯೋಜಕನು,

(ಎ) ನೌಕರನಿಗೆ ಮೂರು ದಿನಗಳಿಗೂ ಮೀರಿದ ಅವಧಿಗೆ ಪೂರ್ಣ ಅಥವಾ ಭಾಗಶಃ ಅಶಕ್ತತೆ ಉಂಟಾಗಿರದ ಯಾವುದೇ ಹಾನಿಗೆ ಸಂಬಂಧಪಟ್ಟಂತೆ;

(ಬಿ) ಅಪಘಾತದಲ್ಲಿ ಮರಣ ಅಥವಾ ಶಾಶ್ವತ ಸಂಪೂರ್ಣ ಅಸಮರ್ಥತೆ ಉಂಟಾಗದೇ ಅಪಘಾತಕ್ಕೆ ನೇರವಾಗಿ ಕಾರಣವಾಗುವ ಈ ಕೆಳಕಂಡ ಸಂದರ್ಭಗಳಲ್ಲಿ, ಎಂದರೆ:

(i) ಅಪಘಾತದ ಸಮಯದಲ್ಲಿ ನೌಕರನು ಮದ್ಯದ ಅಥವಾ ಮಾದಕ ಔಷಧದ ಪ್ರಭಾವಕ್ಕೆ ಒಳಗಾಗಿದ್ದರೆ, ಅಥವಾ

(ii) ನೌಕರರಿಗೆ ಸುರಕ್ಷತೆ ಒದಗಿಸುವ ಉದ್ದೇಶಕ್ಕಾಗಿ ವ್ಯಕ್ತವಾಗಿ ನೀಡಿದ ಆದೇಶದ ಅಥವಾ ವ್ಯಕ್ತರೂಪದಲ್ಲಿ ರಚಿಸಲಾದ ನಿಯಮದ ಪಾಲನೆಯಲ್ಲಿ ನೌ ಕ ರ ನ ಉದ್ದೇಶ ಪೂರ್ವಕವಾಗಿ ತೋರಿದ ನಿರ್ಲಕ್ಷ್ಯದಿಂದಾಗಿ ಅಪಘಾತ ಉಂಟಾಗಿದ್ದರೆ; ಅಥವಾ

(iii) ನೌಕರರಿಗೆ ಸುರಕ್ಷತೆ ಒದಗಿಸುವ ಉದ್ದೇಶಕ್ಕಾಗಿ ನೀಡಲಾಗಿರುವ ಯಾವುದೇ ರಕ್ಷಣಾ ಅಥವಾ ಇತರ ಸುರಕ್ಷಾ ಸಾಧನವನ್ನು ನೌಕರನು ತಿಳಿದೂ ತಿಳಿದೂ ತೆಗೆದುಹಾಕಿದ್ದರೆ ಅಥವಾ ಅದನ್ನು ಉಪೇಕ್ಷಿಸಿದ್ದರೆ

-ಉಂಟಾಗುವ ಯಾವುದೇ ಹಾನಿಗೆ ಸ ಂ ಬ ಂ ಧಪಟ್ಟಂತೆ ಹೊಣೆಗಾರನಾಗಿರುವುದಿಲ್ಲ.

(2) ಅನುಸೂಚಿ-III ರ ಭಾಗ ' ಎ'ಯಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ನಿಯೋಜನೆಯಲ್ಲಿ ನಿಯೋಜಿತನಾದ [ಒಬ್ಬ ನೌಕರನಿಗೆ] ಆ ನಿಯೋಜನೆಯಲ್ಲಿ ವಿಶಿಷ್ಟವಾಗಿರುವ ವೃತ್ತಿ ರೋಗವೆಂದು ನಿರ್ದಿಷ್ಟಪಡಿಸಲಾದ ಯಾವುದೇ ಕಾಯಿಲೆ ಉಂಟಾದರೆ ಅಥವಾ ಅನುಸೂಚಿ-III ರ ಭಾಗ ' ಬಿ'ಯಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ನಿಯೋಜನೆಯಲ್ಲಿ ಆರು ತಿಂಗಳಿಗೆ ಕಡಿಮೆಯಲ್ಲದ ಅವಧಿಗೆ ನಿರಂತರ ನಿಯೋಜನೆಯಲ್ಲಿದ್ದರೆ, ( ಆ ನಿಯೋಜಕನ ಸೇವೆಯಲ್ಲಿದ್ದಾಗ, ಅದೇ ತರಹದ ನಿಯೋಜನೆಯಲ್ಲಿ ಯಾರೇ ಇತರ ನಿಯೋಜಕನಲ್ಲಿ ಆ ಸೇವಾವಧಿಯು ಒಳಗೊಂಡಿರತಕ್ಕದ್ದಲ್ಲ ಅದರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕಾಯಿಲೆ ಉಂಟಾದರೆ ಅಥವಾ ಅನುಸೂಚಿ-III ರ ಭಾಗ ' ಸಿ'ಯಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ನಿಯೋಜನೆಯಲ್ಲಿ ಒಬ್ಬರು ಅಥವಾ ಅದಕ್ಕೂ ಹೆಚ್ಚು  ನಿಯೋಜಕರ ಸೇವೆಯಲ್ಲಿದ್ದಾಗ ಹಾಗೂ ಅಂಥ ಪ್ರತಿಯೊಂದು ನಿಯೋಜನೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ನಿರ್ದಿಷ್ಟಪಡಿಸ ಬಹುದಾದಂಥ ನಿರಂತರ ಅವಧಿಯಲ್ಲಿ, ಆ ಅನುಸೂಚಿಯಲ್ಲಿ ವೃತ್ತಿರೋಗವೆಂದು ನಿರ್ದಿಷ್ಟಪಡಿಸಲಾದ ಯಾವುದೇ ಕಾಯಿಲೆ ಉ ಂ ಟಾದರೆ, ಅ ಂ ಥ ಕಾಯಿಲೆಯನ್ನು ಈ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುವ ಅಪಘಾತದಿಂದಾದ ಹಾನಿಯೆಂದು ಭಾವಿಸತಕ್ಕದ್ದು ಮತ್ತು ಈ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುವ ಅಪಘಾತದಿಂದಾದ ಹಾನಿಯಾಗಿದ್ದ ಹೊರತು, ಮತ್ತು ಪ್ರತಿಕೂಲವಾದುದು ರುಜುವಾತಾದ ಹೊರತು, ಆ ಅಪಘಾತವನ್ನು ನಿಯೋಜನೆಯಿ ಂ ದಾಗಿ, ಮತ್ತು ಆ ಕೆಲಸದಲ್ಲಿದ್ದಾಗ ಉಂಟಾದುದೆಂದು ಪರಿಗಣಿಸತಕ್ಕದ್ದು.

ಪರಂತು,

(ಎ) ಅನುಸೂಚಿ-III ರ ಭಾಗ ' ಸಿ'ಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಿಯೋಜನೆಯಲ್ಲಿ ಒಬ್ಬ ಅಥವಾ ಒಬ್ಬನಿಗಿಂತ ಹೆಚ್ಚು ನಿಯೋಜಕರ ಬಳಿ ನೌಕರನು ಕೆಲಸ ಮಾಡುತ್ತಿರುವಾಗ ಆ ಆ ನಿಯೋಜನೆಗಾಗಿ ಈ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಗಿಂತ ಕಡಿಮೆಯಲ್ಲದ ನಿರಂತರ ಅವಧಿಯಲ್ಲಿ ಆ ನಿಯೋಜನೆಗೆ ವಿಶಿಷ್ಟವಾದ ವೃತ್ತಿರೋಗವೆಂದು ನಿರ್ದಿಷ್ಟಪಡಿಸಲಾದ ಕಾಯಿಲೆ ಉಂಟಾದರೆ; ಮತ್ತು

(ಬಿ) ಆ ಕಾಯಿಲೆಯು ಆ ನಿ ಂ ಯೋಜನೆಯಿ ಂ ದ ಉಂಟಾದುದು ಮತ್ತು ಕೆಲಸ ಮಾಡುತ್ತಿರುವಾಗ ಬಂದಿರುವುದು ಎಂದು ರುಜುವಾತಾದರೆ,

ಹೀಗೆ ತಗಲುವಂತಹ ಕಾಯಿಲೆಯನ್ನು ಈ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುವ ಅಪಘಾತದಿಂದಾದ ಹಾನಿ ಎಂಬುದಾಗಿ ಭಾವಿಸತಕ್ಕದ್ದು:

ಮತ್ತೂ ಪರಂತು, ಅನುಸೂಚಿ-III ರ ಭಾಗ 'ಬಿ' ಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಿಯೋಜನೆಯಲ್ಲಿ ಯಾರೇ ನಿಯೋಜಕನ ಅಧೀನದಲ್ಲಿ ಅಥವಾ ಅದೇ ಅನುಸೂಚಿಯಲ್ಲಿಯ ಭಾಗ ' ಸಿ'ಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಿಯೋಜನೆಯಲ್ಲಿ ಸೇವೆ ಸಲ್ಲಿಸುವ ನೌಕರನು ಒಬ್ಬ ಅಥವಾ ಒಬ್ಬನಿಗಿಂತ ಹೆಚ್ಚು ನಿಯೋಜಕರಲ್ಲಿ ಸೇವೆ ಸಲ್ಲಿಸಿದ್ದು ಈ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ನಿರಂತರ ಅವಧಿಯವರೆಗೆ ಸೇವೆ ಸಲ್ಲಿಸಿರುವುದು ರುಜುವಾತಾದರೆ ಮತ್ತು ಸಂದರ್ಭಾನುಸಾರ, ಸದರಿ ಭಾಗ ' ಬಿ'ಯಲ್ಲಿ ಅಥವಾ ಸದರಿ ಭಾಗ ' ಸಿ'ಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕಾಯಿಲೆಯು ಅಂಥ ಸೇವಾ ಸಮಾಪ್ತಿಯ ತರುವಾಯ ಅವನಿಗೆ ತಗುಲಿದರೆ, ಅದು ಆ ನಿಯೋಜನೆಗೆ ವಿಶಿಷ್ಟವಾದ ವೃತ್ತಿರೋಗವೆಂದು ಅದರಲ್ಲಿ ನಿರ್ದಿಷ್ಟಪಡಿಸಲಾದ, ಕಾಯಿಲೆ

ಉಂಟಾದರೆ ಮತ್ತು ಅಂಥ ರೋಗವು ಆ ನಿಯೋಜನೆಯಿಂದ ಬಂದುದಾದರೆ, ಹಾಗೆ ತಗುಲಿದ ಈ ರೋಗವನ್ನು ಈ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಅಪಘಾತದಿಂದುಂಟಾದ ಹಾನಿ ಎಂದು ಭಾವಿಸತಕ್ಕದ್ದು.

( 2 ಎ) ಅನುಸೂಚಿ-III ರ ಭಾಗ ' ಸಿ'ಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಿಯೋಜನೆಯಲ್ಲಿ ನಿಯೋಜಿತನಾದ [ಒಬ್ಬ ನೌಕರನಿಗೆ] ಆ ನಿಯೋಜನೆಯಲ್ಲಿ ವಿಶಿಷ್ಟವಾಗಿರುವ ವೃತ್ತಿ ರೋಗವು ತಗುಲಿದರೆ, ಹಾಗೆ ತಗುಲಿದ ಆ ಕಾಯಿಲೆಯನ್ನು ಈ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಅಪಘಾತದಿಂದಾದ ಹಾನಿಯೆಂದು ಭಾವಿಸಲಾಗುವುದು, ಮತ್ತು ಅಂಥ ನಿಯೋಜನೆಯು ಒಬ್ಬರಿಗಿಂತ ಹೆಚ್ಚು ನಿಯೋಜಕರ ಅಧೀನದಲ್ಲಿದ್ದರೆ ಅಂಥ ಎಲ್ಲ ನಿಯೋಜಕರು, ಕಮೀಷನರರು ಆ ಸಂದರ್ಭಗಳಲ್ಲಿ ನ್ಯಾಯ ಸಮ್ಮತವೆಂದು ಭಾವಿಸಬಹುದಾದ ಪ್ರಮಾಣಾನುಸಾರ ನಷ್ಟಪರಿಹಾರ ಸಂದಾಯ ಮಾಡಲು ಹೊಣೆಗಾರರಾಗತಕ್ಕದ್ದು.

( 3) ಅನುಸೂಚಿ-III ರ ಭಾಗ ' ಎ ' ಮತ್ತು ಭಾಗ ' ಬಿ'ಯಲ್ಲಿ ನಿರ್ದಿಷ್ಟಪಡಿಸಿದ ನಿಯೋಜನೆಗಳ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಮತ್ತು ಆ ಅನುಸೂಚಿಯ ಭಾಗ ' ಸಿ'ಯಲ್ಲಿ ನಿರ್ದಿಷ್ಟಪಡಿಸಿದ ನಿಯೋಜನೆಗಳ ಸಂದರ್ಭದಲ್ಲಿ ಕೇಂದ್ರ ಸರ್ಕಾರವು, ಅನುಸೂಚಿ-III ರಲ್ಲಿ ನಿರ್ದಿಷ್ಟಪಡಿಸಿದ ನಿಯೋಜನೆಗಳಿಗೆ ಯಾವುದೇ ವಿವರಣೆಯ ನಿಯೋಜನೆಯನ್ನು ಸೇರಿಸಬಹುದೆಂಬ ತನ್ನ ಉದ್ದೇಶವನ್ನು ಅದೇ ರೀತಿಯ ಅಧಿಸೂಚನೆ ಮೂಲಕ ಮೂರು ತಿಂಗಳುಗಳಿಗೆ ಕಡಿಮೆಯಿಲ್ಲದ ಅವಧಿಯ ನೋಟೀಸನ್ನು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೊಟ್ಟ ತರುವಾಯ, ಸೇರಿಸಬಹುದು, ಮತ್ತು ಹಾಗೆ ಸೇರಿಸಲಾದಂಥ ನಿಯೋಜನೆಗಳ ಸಂದರ್ಭದಲ್ಲಿ ಅನುಕ್ರಮವಾಗಿ ಆ ನಿಯೋಜನೆಗಳಿಗೆ ವಿಶಿಷ್ಟವಾಗಿರುವ ವೃತ್ತಿರೋಗಗಳೆಂದು ಈ ಪ್ರಕರಣಗಳ ಉದ್ದೇಶಗಳಿಗಾಗಿ ಭಾವಿಸತಕ್ಕ ರೋಗಗಳೆಂದು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಆ ತರುವಾಯ ಉಪ-ಪ್ರಕರಣ (2) ರ ಉಪಬ ಂ ಧಗಳು, ಅಂಥ ರೋಗಗಳು ಆ ನಿಯೋಜನೆಗಳಿಗೆ ವಿಶಿಷ್ಟವಾದ ವೃತ್ತಿ ರೋಗಗಳೆಂದು ಈ ಅಧಿನಿಯಮದ ಮೂಲಕ ಘೋಷಿಸಲಾಗಿದ್ದರೆ ಹೇಗೋ ಹಾಗೆ, ಕೇಂದ್ರ ಸರ್ಕಾರವು ಅಧಿಸೂಚನೆಯ ಸಂದರ್ಭದಲ್ಲಿ, ಈ ಅಧಿನಿಯಮವು ಅನ್ವಯವಾಗುವಂಥ ಪ್ರದೇಶಗಳೊಳಗಿನ ಅಥವಾ ರಾಜ್ಯ ಸರ್ಕಾರದ ಅಧಿಸೂಚನೆಯು ಸ ಂ ದರ್ಭದಲ್ಲಿ ರಾಜ್ಯದೊಳಗೆ ಅನ್ವಯವಾಗತಕ್ಕದ್ದು.

(4) (2), (2ಎ) ಮತ್ತು (3) ಈ ಉಪ-ಪ್ರಕರಣಗಳ ಮೂಲಕ ಉಪಬಂಧಿಸಿರುವುದನ್ನು ಉಳಿದು, ಒಬ್ಬ [ನೌಕರನಿಗೆ] ಅವನ ಕೆಲಸದಲ್ಲಿ ಮತ್ತು ಅವನು ಕೆಲಸ ಮಾಡುವ ಸಮಯದಲ್ಲಾದ ಅಪಘಾತದಿಂದುಂಟಾದ ನಿರ್ದಿಷ್ಟವಾದ ಹಾನಿಗೆ ನೇರವಾಗಿ ಕಾರಣವಾಗಬಹುದಾದಂಥ ಕಾಯಿಲೆ ಆಗಿದ್ದ ಹೊರತಾಗಿ ಉಳಿದ ಯಾವುದೇ ಕಾಯಿಲೆಗೆ ಸಂಬಂಧಪಟ್ಟಂತೆ ಯಾವ ನಷ್ಟ ಪರಿಹಾರವನ್ನೂ ಸಂದಾಯ ಮಾಡತಕ್ಕದ್ದಲ್ಲ.

(5) [ಒಬ್ಬ ನೌಕರನು,] ನಿಯೋಜಕನ ಅಥವಾ ಯಾರೇ ಇತರ ವ್ಯಕ್ತಿಯ ವಿರುದ್ಧವಾಗಿ ಹಾನಿಯ ಸಂಬಂಧದಲ್ಲಿ ನಷ್ಟ ಪರಿಹಾರಕ್ಕಾಗಿ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದರೆ, ಆ ಯಾವುದೇ ಹಾನಿಗೆ ಸಂಬಂಧಪಟ್ಟಂತೆ ಆ ನೌಕರನು ನಷ್ಟ ಪರಿಹಾರ ಪಡೆಯಲು ಯಾವುದೇ ಹಕ್ಕನ್ನು ಇದರಲ್ಲಿರುವುದಾವುದೂ ನೀಡುತ್ತದೆಂದು ಭಾವಿಸತಕ್ಕದ್ದಲ್ಲ, ಮತ್ತು ಒಬ್ಬ ನೌಕರನು ಕೆಳಕ ಂ ಡ ಯಾವುದೇ ಹಾನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿ ನಷ್ಟಪರಿಹಾರಕ್ಕಾಗಿ,

(ಎ) ಅವನು ಹಾನಿಗೆ ಸಂಬಂಧಪಟ್ಟಂತೆ ನಷ್ಟ ಪರಿಹಾರದ ಕೇಮನ್ನು ಕಮೀಷನರ್ರವರಿಗೆ ಸಲ್ಲಿಸಿದ್ದರೆ; ಅಥವಾ

(ಬಿ) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಹಾನಿಗೆ ಸಂಬಂಧಪಟ್ಟಂತೆ ನಷ್ಟ ಪರಿಹಾರ ಸಂದಾಯ ಮಾಡುವ ಬಗೆಗೆ [ನೌಕರನು] ಮತ್ತು ಅವನ ನಿಯೋಜಕರ ನಡುವೆ ಒಂದು ಒಪ್ಪಂದವೇರ್ಪಟ್ಟರೆ

ಹೂಡಿದ ಯಾವುದೇ ದಾವೆಯು ಊರ್ಜಿತವಾಗತಕ್ಕದ್ದಲ್ಲ.

22. ಸದರಿ ಉಪಬಂಧದ ಜಾಗರೂಕ ಅವಲೋಕನದಿಂದ, ಒಬ್ಬ ವ್ಯಕ್ತಿಗೆ ನಿಯೋಜನೆಯಿಂದ ಮತ್ತು ನಿಯೋಜನೆಯಲ್ಲಿರುವಾಗ ಉಂಟಾದ ಅಪಘಾತದಿಂದ ವೈಯಕ್ತಿಕ ಗಾಯಗಳಾದರೆ, ಆತನ ನಿಯೋಜಕನು ಅಧಿನಿಯಮದ-III ನೇ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಪರಿಹಾರ ಸಂದಾಯ ಮಾಡಲು ಹೊಣೆಗಾರನಾಗುತ್ತಾನೆ ಎಂಬುದು ಸ್ಪಷ್ಟವಾಗುತ್ತದೆ.ಒಪ್ಪಿಕೊಂಡಂತೆ, ಅಪಘಾತ ಸಂಭವಿಸಿದ ದಿನಾಂಕದಂದು ಮೃತನು ತನ್ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದನು ಮತ್ತು ಆತನು ನಿಯೋಜನೆಯಿಂದಾಗಿ ಮತ್ತು

ನಿಯೋಜನೆಯಲ್ಲಿರುವಾಗ ಉಂಟಾದ ಅಪಘಾತದಲ್ಲಿ ಮರಣ ಹೊಂದಿದ್ದಾನೆ ಎಂದು ವಾಹನದ ಮಾಲೀಕರು ನ್ಯಾಯಾಲಯದ ಮುಂದೆ ಶಪಥ ಮಾಡಿ ಹೇಳಿದ್ದಾರೆ.ಆದುದರಿಂದ, ಪ್ರಸ್ತುತ 3 ನೇ ಎದುರುದಾರರ ಅಧೀನದಲ್ಲಿ ಮೃತನು ಕಾರ್ಯನಿರ್ವಹಿಸುತ್ತಿದ್ದನು ಎಂಬ ವಾದವನ್ನು ಒಪ್ಪಲಾಗುವುದಿಲ್ಲ.

23. ಮೇಲ್ಮನವಿದಾರ-ವಿಮಾ ಕಂಪನಿ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ ಎಮ್.ಎಮ್. ಅಂಡ್ ಕಂಪನಿ (ಪ್ರೈವೇಟ್) ಅಮಿಟೆಡ್ -ವಿರುದ್ಧ ಇಬ್ರಾಹಿಂ ಎಮ್, ಇಸಾಕ್ (ಮೇಲಿನ) ಮೊಕದ್ದಮೆಯಲ್ಲಿನ ತೀರ್ಪಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಅದು ಕ್ಲೇಮುದಾರರ ಮಗ ಕಳೆದುಹೋದ ಮೊಕದ್ದಮೆಯಾಗಿದ್ದು, ಕಳೆದುಹೋದ ತನ್ನ ಮಗನ ಮರಣಕ್ಕಾಗಿ ಪರಿಹಾರವನ್ನು ಕ್ಲೇಮು ಮಾಡಿ ಅಧಿನಿಯಮದ 3 ನೇ ಪ್ರಕರಣದ ಅಡಿಯಲ್ಲಿ ಕ್ಲೇಮುದಾರರು ಅರ್ಜಿಯನ್ನು ಸಲ್ಲಿಸಿದ್ದರು.ಒಪ್ಪಿಕೊಂಡಂತೆ ಸದರಿ ವಿಷಯದಲ್ಲಿ, ಡಿಸೆಂಬರ್ 1951 ರಿಂದ ತನ್ನ ಮಗ ಕಾಣೆಯಾಗಿದ್ದಾನೆ ಎಂಬುದು ಕ್ಲೇಮುದಾರರ ವಾದವಾಗಿತ್ತು ಮತ್ತು ಅದು ತನ್ನ ನಿಯೋಜನೆಯಿಂದಾಗಿ ಮತ್ತು ನಿಯೋಜನೆಯಲ್ಲಿರುವಾಗ ಸಂಭವಿಸಿದ ಅಪಘಾತದಲ್ಲಿ ತನ್ನ ಮಗ ಮೃತನಾಗಿದ್ದಾನೆ ಅಥವಾ ವೈಯಕ್ತಿಕ ಗಾಯಗಳುಂಟಾಗಿವೆ ಎಂಬುದು ಅವರ ವಾದವಾಗಿರಲಿಲ್ಲ.ಆ ಸಂದರ್ಭಗಳಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಅಪಘಾತದಿಂದ ಮರಣ ಹೊಂದಿದ ಸಂದರ್ಭದಲ್ಲಿ, ತನ್ನ ನಿಯೋಜನೆಯಿಂದ ಮತ್ತು ನಿಯೋಜನೆಯಲ್ಲಿರುವಾಗ ಉಂಟಾದ ಅಪಘಾತವನ್ನು ಸಾಬೀತುಪಡಿಸುವ ಹೊಣೆಯು ಕಾರ್ಮಿಕನ ಮೇಲಿರುತ್ತದೆ ಮತ್ತು ಮೊಕದ್ದಮೆಯಲ್ಲಿ ಪ್ರತ್ಯಕ್ಷ ಸಾಕ್ಷ್ಯ ಎ ಇಲ್ಲದೆ ಇದ್ದುದರಿಂದ, ಕೇಮುದಾರರು ಪರಿಹಾರಕ್ಕೆ ಹಕ್ಕುಳ್ಳವನಾಗಲಿಲ್ಲ.ಪ್ರಸ್ತುತ ಮೊಕದ್ದಮೆಯಲ್ಲಿ ಒಪ್ಪಿಕೊಂಡಿರುವಂತೆ, ಮೃತ ಶಿವಶಂಕರ್ ವಾಹನವನ್ನು ಚಲಾಯಿಸುತ್ತಲೇ ಇರಲಿಲ್ಲ ಎಂಬುದು ಮೇಲ್ಮನವಿದಾರ ವಿಮಾ ಕಂಪನಿಯ ವಾದವಾಗಿರುವುದಿಲ್ಲ.ಮೃತನು 3 ನೇ ಎದುರುದಾರ-ಮಾಲೀಕರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರಲಿಲ್ಲ ಎಂಬುದು ಮೇಲ್ಮನವಿದಾರ-ವಿಮಾ ಕಂಪನಿಯು ಎತ್ತಿದ ಏಕ ಮಾತ್ರ ವಿವಾದವಾಗಿದೆ.ವಾಹನದ ಮಾಲೀಕರು ಮೃತನು ತನ್ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದನು ಹಾಗೂ ತನ್ನ ನಿಯೋಜನೆಯಿಂದಾಗಿ ಮತ್ತು ನಿಯೋಜನೆಯಲ್ಲಿರುವಾಗ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮರಣ ಹೊಂದಿದನು ಎಂದು ವಾದಿಸಿದ್ದಾರೆ.ಒಪ್ಪಿಕೊಂಡಂತೆ, ಅಪಘಾತವಾದ ದಿನಾಂಕದಂದು ವಿಮಾ ಪಾಲಿಸಿಯು ಚಾಲ್ತಿಯಲ್ಲಿತ್ತು.ಆದುದರಿಂದ, ಸದರಿ ತೀರ್ಪು ತೀರ್ಪ ಮೊಕದ್ದಮೆಯ ಸಂಗತಿಗಳಿಗೆ ಮತ್ತು ಸಂದರ್ಭಗಳಿಗೆ ಅನ್ವಯವಾಗುವುದಿಲ್ಲ.

24. ಮೇಲ್ಮನವಿದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ ವರದಿಯಾದ ಗೊಟ್ಟುಮುಕ್ಕಲ ಅಪ್ಪಲ ನರಸಿಂಹ ರಾಜು ಮತ್ತು ಇತರರು ವಿರುದ್ಧ ರಾಷ್ಟ್ರೀಯ ವಿಮಾ ಕಂಪನಿ ನಿಯಮಿತ ಮತ್ತು ಇನ್ನೊಬ್ಬರು (ಮೇಲಿನ) ಮೊಕದ್ದಮೆಯಲ್ಲಿನ ತೀರ್ಪಿಗೆ ಸಂಬಂಧಪಟ್ಟಷ್ಟರಮಟ್ಟಿಗೆ, ಮೃತನು ಮತ್ತು ಟ್ರ್ಯಾಕ್ಟರ್ನ ಮಾಲೀಕರು ಪತಿ-ಪತ್ನಿಯರಾಗಿದ್ದು, ಅವರ ನಡುವೆ ನಿಯೋಜಕ ಮತ್ತು ನೌಕರ ಸಂಬಂಧದ ಪ್ರಶ್ನೆ ಉದ್ಭವಿಸುವುದಿಲ್ಲವಾದ್ದರಿಂದ, ಮೃತನು ನೌಕರ ಪರಿಹಾರ ಅಧಿನಿಯಮದ 2 ( 1) (ಎನ್) ಪ್ರಕರಣದ ಉಪಬಂಧಗಳ ಅರ್ಥವ್ಯಾಪ್ತಿಯೊಳಗೆ ಕಾರ್ಮಿಕನಲ್ಲವೆಂದು ವಿಮಾಕರ್ತನು ವಾದ ಮಾಡಿರುವ ಮೊಕದ್ದಮೆಯಾಗಿದೆ.ಅಂಥ ಸಂದರ್ಭಗಳಲ್ಲಿ, ಕ್ಲೇಮುದಾರರ ಕ್ಲೇಮನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ತಿರಸ್ಕರಿಸಿದೆ.ಸದರಿ ಮೊಕದ್ದಮೆಯು, ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಮತ್ತು ಸಂದರ್ಭಗಳಿಗೆ ಅನ್ವಯವಾಗುವುದಿಲ್ಲ.

25. ನಾಮ್ದೇವ್ -ವಿರುದ್ಧ ಭರತ್ ಮತ್ತು ಇನ್ನೊಬ್ಬರ (ಮೇಲಿನ) ಮೊಕದ್ದಮೆಯಲ್ಲಿ ಬಾಂಬೆಯ ಮಾನ್ಯ ಉಚ್ಚ ನ್ಯಾಯಾಲಯದ ಔರಂಗಾಬಾದ್ನ ಏಕಪೀಠವು, ನೌಕರರ ಪರಿಹಾರ ಅಧಿನಿಯಮದ 2 (1) (ಎನ್), 3 (1) ಮತ್ತು 30 (1) ನೇ ಪ್ರಕರಣದ ಉಪಬಂಧಗಳನ್ನು ಪರಿಗಣಿಸುವಾಗ, 17 ನೇ ಮತ್ತು 18 ನೇ ಕಂಡಿಕೆಗಳಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

17. 1ನೇ ಎದುರುದಾರಯೊಂದಿಗೆ ಅರ್ಜಿದಾರನ ಹಿಂದಿನ ನಿಯೋಜನೆಗೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯವಿಲ್ಲವೆಂದು ಶ್ರೀ ಡೆಂಗಾಲೆ, ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.1923 ರ ಅಧಿನಿಯಮದ 3 ನೇ ಪ್ರಕರಣವು, ಕಾರ್ಮಿಕನ ನಿಯೋಜನೆಯಿಂದ ಮತ್ತು ನಿಯೋಜನೆಯಲ್ಲಿರುವಾಗ ಸಂಭವಿಸುವ ಅಪಘಾತದಿಂದ ಆತನಿಗೆ ಉಂಟಾಗುವ ವೈಯಕ್ತಿಕ ಗಾಯಗಳನ್ನು ಕುರಿತು ಪದ್ಯಾಲೋಚಿಸುತ್ತದೆ.ತನ್ನ ನಿಯೋಜಕನೊಂದಿಗೆ ಸಂಬಂಧಪಟ್ಟ ಕಾರ್ಮಿಕನ ನಿಯೋಜನೆಯ ಅವಧಿಯು ಅಮುಖ್ಯ. ಅಪಘಾತ

ಸಂಭವಿಸಿದ ದಿನದಂದು, ನಿಯೋಜಕನೊಂದಿಗೆ 1923 ರ ಅಧಿನಿಯಮದ 3 ನೇ ಪ್ರಕರಣದ ಮೇರೆಗೆ ಪರಿಹಾರ ಕೋರಿ ಅರ್ಜಿ ಸಲ್ಲಿಸುವ ವ್ಯಕ್ತಿ ನಡುವಿನ ಸಂಬಂಧವು ಮುಖ್ಯವಾಗುತ್ತದೆ.ಪರಂತು, ಸಂಬಂಧಪಟ್ಟ ವ್ಯಕ್ತಿಯು 1923 ರ ಅಧಿನಿಯಮದ 2 ( 1) (ಎನ್) ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಕಾರ್ಮಿಕನಾಗಿದ್ದನು.1997 ಎಸಿಜೆ 246 (ಬಾಂಬೆ) ಯಲ್ಲಿ ವರದಿಯಾದ ಶಿವಾಜಿ ಕೃಷ್ಣ ಗಾಯಕ್ವಾಡ್ -ವಿರುದ್ಧ ಟೆಲಿಕಾಮ್ ಡಿಸ್ಟ್ರಿಕ್ಟ್ ಇಂಜಿನಿಯರ್, ಸಾಂಗ್ಲಿ ಮೊಕದ್ದಮೆ ವಿಷಯದಲ್ಲಿ ಈ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸುವುದು ಸೂಕ್ತವಾಗಿದೆ. ಶಿವಾಜಿ (ಮೇಲೆ ಹೇಳಿದ) ಮೊಕದ್ದಮೆಯ ವಿಷಯದಲ್ಲಿ, ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರು, ಕಾರ್ಮಿಕ ಪರಿಹಾರ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಿದ ಪರಿಹಾರವು ಕಾರ್ಮಿಕನಿಗೆ ಧರ್ಮಾರ್ಥವಾಗಿರದೆ, ಕಾನೂನುಬದ್ಧ ಹಕ್ಕಾಗಿದೆ ಮತ್ತು ನಿಯೋಜನೆಯಿಂದ ಮತ್ತು ನಿಯೋಜನೆಯಲ್ಲಿರುವಾಗ ಸಂಭವಿಸುವ ಯಾವುದೇ ಅಪಘಾತ ಸಂಬಂಧಿ ಘಟನೆಗಳಿಗೆ ಪ್ರತಿಯಾಗಿ ಭದ್ರತೆಯಾಗಿದೆ.4- ಎ ಪ್ರಕರಣದ ಮೇರೆಗೆ 20,000/- ರೂ.ಗಳ ಮೊತ್ತವು ಕನಿಷ್ಠ ಪರಿಹಾರ ಮೊತ್ತವಾಗಿದೆ.ಗಾಯಗೊಂಡ ಕೆಲಸಗಾರನು ಸಾಂದರ್ಭಿಕ ಕಾರ್ಮಿಕನಾಗಿರಬಹುದು ಅಥವಾ ನಿಯತ ನೌಕರನಾಗಿರಬಹುದು, ಕಾರ್ಮಿಕನು ಒಂದು ದಿನಕ್ಕಾಗಿ ಮಾತ್ರವೇ ಕಾರ್ಯನಿರ್ವಹಿಸಿ ಅಪಘಾತಕ್ಕೀಡಾಗಿದ್ದರೂ, ಆತನ ಸೇವಾವಧಿಯು ಅಧಿನಿಯಮದ ಅಡಿಯಲ್ಲಿ ಪರಿಹಾರ ನೀಡುವ ಉದ್ದೇಶಕ್ಕೆ ಸಂಬಂಧಿಸುವುದಿಲ್ಲ.ಶಿವಾಜಿ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಈ ಉಚ್ಚ ಚ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರು ತೆಗೆದುಕೊಂಡು ನಿಲುವಿನೊಂದಿಗೆ ನಾನು ಗೌರವಯುತ ಸಮ್ಮತಿ ಹೊಂದಿದ್ದೇನೆ.

18. ಅಪಘಾತದ ವೇಳೆಯಲ್ಲಿ ಅರ್ಜಿದಾರನು 1 ನೇ ಎದುರುದಾರನ ನಿಯೋಜನೆಯಲ್ಲಿದ್ದನು ಎಂಬುದು ವಾದ ಮತ್ತು ಸಾಕ್ಷ್ಯದಿಂದ ಸಾಬೀತಾಗಿದೆ.1990 ಎಸಿಜೆ 923 (ಬಾಂಬೆ) ಯಲ್ಲಿ ವರದಿಯಾದ ಜುಬೇದಾ ಬಾನೋ - ವಿರುದ್ಧ ವಿಭಾಗೀಯ ನಿಯಂತ್ರಕರು, ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮ D ಮೊಕದ್ದಮೆಯ ವಿಷಯದಲ್ಲಿನ ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ಉಲ್ಲೇಖಿಸುವುದು ಇಲ್ಲಿ ಉಪಯುಕ್ತವಾಗುವುದು.ಜುಬೇದಾ ಬಾನೋ (ಮೇಲೆ ಹೇಳಿದ) ಮೊಕದ್ದಮೆಯ ವಿಷಯದಲ್ಲಿನ ಸಂಗತಿಗಳೆಂದರೆ, 51 ವರ್ಷ ವಯಸ್ಸಿನ ಅಬ್ದುಲ್ ಅಜೀಜ್ ಎಂಬಾತನು 7 ನೇ ನವೆಂಬರ್, 1983 ರಂದು ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮದ ಸೇವೆಯಲ್ಲಿ ಬಸ್ ಚಾಲಕನಾಗಿದ್ದನು.ತನ್ನ ನಿಯತ ನಿಯೋಜನೆಯಲ್ಲಿ ಆತನು ಉಮ್ರದ್ನಿಂದ ನಾಗಪುರದವರೆಗೆ ಪ್ರಯಾಣಿಕರ ಬಸ್ಅನ್ನು ಚಲಾಯಿಸುತ್ತಿದ್ದನು.ಸುಮಾರು ರಾತ್ರಿ 08.30 ಗಂಟೆಗೆ ಸುಮಾರು ಎರಡು ಗಂಟೆಗಳ ಕಾಲ ತಡವಾಗಿ ಬಸ್ ನಾಗಪುರವನ್ನು ತಲುಪಿತು.ಪ್ರಯಾಣದ ಎರಡನೇ ಭಾಗವು ರಾತ್ರಿ 09.30 ಗಂಟೆಗೆ ಗಿರಾದ್ ಸ್ಥಳಕ್ಕೆ ಬರುವುದಿತ್ತು.ಬಸ್ ನಿಲ್ದಾಣದ ಪ್ಲಾಟ್ಫಾರ್ಮ್ನಲ್ಲಿ ಬಸ್ಅನ್ನು ನಿಲ್ಲಿಸಲಾಯಿತು, ಎಲ್ಲಾ ಪ್ರಯಾಣಿಕರು ಕೆಳಗಿಳಿದರು ಮತ್ತು ನಿರ್ವಾಹಕ ಇಟ್ಬಾಲ್ ಷೇಕ್ ಟಿಕೆಟ್ಗಳನ್ನು ನೀಡಲು ಮುಂದಾದರು.ರಾಮಚಂದ್ರ ಮತ್ತು ಮೊಹಮ್ಮದ್ ಹುಸೇನ್ ಎಂಬ ಗಿರಾದ್ಗೆ ಹೋಗುವ ಇಬ್ಬರು ಮೊದಲ ಪ್ರಯಾಣಿಕರು ಬಸ್ ಹತ್ತಿದಾಗ, ಅಬ್ದುಲ್ ಅಜೀಜ್ ಅವರು ಪ್ರಜ್ಞಾಶೂನ್ಯರಾಗಿ ಬಾನೆಟ್ ಮತ್ತು ಚಾಲಕ (ಸ್ಟೀಯರಿಂಗ್) ಚಕ್ರದ ಮೇಲೆ ಒರಗಿಕೊಂಡಿರುವುದನ್ನು ಕಂಡರು.ಅವರು ಈ ವಿಷಯವನ್ನು ನಿರ್ವಾಹಕನಿಗೆ ತಿಳಿಸಿದರು, ಅವರು ಮತ್ತು ಮೆಕ್ಯಾನಿಕ್ ಮೊಹಮ್ಮದ್ ಅಕ್ರಮ್ ಅವರೊಂದಿಗೆ ಬಸ್ ಹತ್ತಿ, ಅಬ್ದುಲ್ ಅಜೀಜ್ ಅವರ ದೇಹವನ್ನು ಎತ್ತಿ ಅಂಗಾತ ತಿಯಲ್ಲಿ ಇಟ್ಟರು ಮತ್ತು ಆ ತರುವಾಯ ನೇರವಾಗಿ ಸರ್ಕಾರಿ ವೈದ್ಯಕೀಯ ಕಾಲೇಜ್ ಆಸ್ಪತ್ರೆಗೆ ಬಸ್ಅನ್ನು ತೆಗೆದುಕೊಂಡು ಹೋದರು, ಅಲ್ಲಿ ಅವರನ್ನು ಪರೀಕ್ಷಿಸಿದ ವೈದ್ಯರು ಸುಮಾರು ರಾತ್ರಿ 9.00 ಗಂಟೆಗೆ ಅಬ್ದುಲ್ ಅಜೀಜ್ ಅವರು ಮೃತರಾಗಿರುವರೆಂದು ಘೋಷಿಸಿದರು.ಹಠಾತ್ ಹೃದಯಾಘಾತದಿಂದಾಗಿ ಹೃದಯ ಸ್ತಂಭನವಾಗಿ ಮರಣ ಸಂಭವಿಸಿದೆ ಎಂದು ಹೇಳಲಾಯಿತು.ಈ ಸಂಗತಿಗಳ ಹಿನ್ನೆಲೆಯಲ್ಲಿ, ಈ ನ್ಯಾಯಾಲಯದ ವಿಭಾಗೀಯ ಪೀಠವು, ಜುಬೇದಾ ಬಾನೋ (ಮೇಲೆ ಹೇಳಿದ) ವಿಷಯದಲ್ಲಿ (ಇದೇ ರೀತಿ ಮ್ಯಾಕಿನನ್ ಮೆಕೆಂಜಿ ಅಂಡ್ ಕಂಪನಿ ಪ್ರೈವೇಟ್ ಲಿಮಿಟೆಡ್ -ವಿರುದ್ಧ-ರೀಟಾ ಫರ್ನಾಂಡಿಸ್, 1969 ಎಸಿಜೆ 419 (ಎಸ್ಸಿ)} ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"ಈ ಪ್ರಕರಣದ ಮೇರೆಗೆ, ಒಬ್ಬ ಕಾರ್ಮಿಕನ ಮರಣ ಮತ್ತು ಆತನ ನಿಯೋಜನೆಯ ನಡುವೆ ಕೆಲವು ಸಾಂದರ್ಭಿಕ ಸ ಂ ಬ ಂ ಧವಿರ ಬೇಕ ಎ ಂ ಬುದು ಸಾಬೀತಾದ ವಿಷಯವಾಗಿದೆ.ಕಾರ್ಮಿಕನು ಯಾವ ಒಂದು ನಿರ್ದಿಷ್ಟ ಕಾಯಿಲೆಯಿಂದ ಬಳಲುತ್ತಿದ್ದನೋ ಅಥವಾ ಬಳಲುತ್ತಿದ್ದಾಗ ಆ ಕಾಯಿಲೆಯ ಸಹಜ ಪರಿಣಾಮವಾಗಿ ಆತನು ಮರಣ ಹೊಂದಿದರೆ, ಆತನ ನಿಯೋಜನೆಯ ಸಾಧಕ-ಬಾಧಕದ ಪರಿಣಾಮವಾಗಿ ಆ ಕಾಯಿಲೆಯಿಂದ ಆತನು ಮರಣ ಹೊಂದಿರುತ್ತಾನಾದ್ದರಿಂದ, ನಿಯೋಜಕನ ಮೇಲೆ ಯಾವುದೇ

ಹೊಣೆಗಾರಿಕೆಯನ್ನು ನಿಗದಿಪಡಿಸಲಾಗುವುದಿಲ್ಲ.ಆದರೆ, ನಿಯೋಜನೆಯು ಮರಣಕ್ಕೆ ಕಾರಣವಾದರೆ ಅಥವಾ ಮರಣದ ಕಾರಣವನ್ನು ತ್ವರಿತಗೊಳಿಸಿದರೆ, ಅಥವಾ ಮರಣವು ಕಾಯಿಲೆಯಿಂದ ಮಾತ್ರವಲ್ಲದೆ ನಿಯೋಜನೆಗೆ ಸ ೦ ಬ ೦ ಧಿಸಿದ ಕಾಯಿಲೆಯಿ 0 ದಾಗಿದ್ದರೆ, ಆಗ ಮರಣವು ನಿಯೋಜನೆಯ ಕಾರಣದಿಂದ ಉಂಟಾಗಿದೆ ಎಂದು ಹೇಳಬಹುದು ಮತ್ತು ನಿಯೋಜಕನು ಹೊಣೆಗಾರನಾಗುತ್ತಾನೆ.

ಪ್ರಸ್ತುತ ಮೊಕದ್ದಮೆಯಲ್ಲಿ, 20 ನೇ ಫೆಬ್ರುವರಿ, 1992 ರಂದು, ಅರ್ಜಿದಾರನಿಗೆ ನಿಯೋಜನೆಯಲ್ಲಿರುವಾಗ ಮತ್ತು ನಿಯೋಜನೆಯಿಂದಾಗಿ ಗಾಯ ಉಂಟಾಗಿದೆ ಎಂಬುದನ್ನು ತೋರಿಸಲು ದಾಖಲೆಯಲ್ಲಿರುವ ಸಾಕ್ಷ್ಯವು ಪರಾಪ್ತವಾಗಿದೆ.ಆದುದರಿಂದ, ನನ್ನ ಅಭಿಪ್ರಾಯದಲ್ಲಿ, ಮಾನ್ಯ ಕಾರ್ಮಿಕರ ಪರಿಹಾರ ಆಯುಕ್ತರು ಅರ್ಜಿದಾರನ ಪರವಾಗಿ ಈ ಅಂಶದ ಮೇಲೆ ನಿರ್ಣಯವನ್ನು ದಾಖಲಿಸುವಲ್ಲಿ ನ್ಯಾಯಯುತವಾಗಿ ನಡೆದುಕೊಂಡಿದ್ದಾರೆ.

26. ಅಧಿನಿಯಮದ 2 (2) (ಎನ್) ಮತ್ತು 13 ನೇ ಪ್ರಕರಣಗಳ ಉಪಬಂಧಗಳನ್ನು ಪರಿಗಣಿಸುವಾಗ, ವಿಭಾಗೀಯ ಇಂಜಿನಿಯರ್, ದೂರಸಂಪರ್ಕ, ಪಲಾಸ, ಶ್ರೀಕಾಕುಳಂ -ವಿರುದ್ಧ-ಶಂಕರ ರಾವ್ (ಮೇಲಿನ) ಮೊಕದ್ದಮೆಯಲ್ಲಿ, ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರು 6 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದ್ದಾರೆ:

6. 1ನೇ ಎದುರುದಾರರು ಸಾಂದರ್ಭಿಕ ಕಾರ್ಮಿಕನಾಗಿದ್ದರಿಂದ, ಅಧಿನಿಯಮದ 2 ( 1) (ಎನ್) ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಕಾರ್ಮಿಕನಲ್ಲ ಎಂಬುದು ಅಪೀಲಿನಲ್ಲಿ ಎತ್ತಲಾದ ಅಂಶವಾಗಿತ್ತು.ಕಾರ್ಮಿಕ ಪದದ ಪರಿಭಾಷೆಯನ್ನು ಈ ಮುಂದಿನಂತೆ ಓದಲಾಗಿದೆ: "ಕಾರ್ಮಿಕ" ಎಂದರೆ, (ಸಾಂದರ್ಭಿಕ ಸ್ವರೂಪ ದ ನಿಯೋಜನೆಯಾಗಿರುವ ಮತ್ತು ನಿಯೋಜಕನ ವ್ಯಾಪಾರ ಅಥವಾ ವ್ಯವಹಾರದ ಉದ್ದೇಶಗಳಿಗೆ ಹೊರತುಪಡಿಸಿ ಅನ್ಯಥಾ ಕಾರಣಕ್ಕೆ ನಿಯೋಜಿತನಾಗಿರುವ ವ್ಯಕ್ತಿಯನ್ನು ಹೊರತುಪಡಿಸಿ)

(i) ರೈಲ್ವೆ ಅಧಿನಿಯಮ, 1989 ರ (1989 ಡಿ 24) 2 ನೇ ಪ್ರಕರಣದ (34) ನೇ ಖಂಡದಲ್ಲಿ ಪರಿಭಾಷಿಸಲಾದಂತೆ ರೈಲ್ವೆಯ ಯಾವುದೇ ಆಡಳಿತಾತ್ಮಕ ಜಿಲ್ಲೆ ಅಥವಾ ಉಪ-ವಿಭಾಗೀಯ ಕಚೇರಿಯಲ್ಲಿ ಖಾಯಂ ಆಗಿ ನಿಯೋಜಿತನಾಗಿರದ ಮತ್ತು ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಲಾದಂತೆ ಅಂಥ ಯಾವುದೇ ಪದದಲ್ಲಿ ನಿಯೋಜಿತನಾಗಿರದ ರೈಲ್ವೆ ನೌಕರನಾಗಿರುವ; ಅಥವಾ

( i ಎ) (ಎ) ಹಡಗಿನ ನಾವಿಕರ ತಂಡದ ನಾಯಕ, ನಾವಿಕ ಅಥವಾ ಇತರೇ ಸದಸ್ಯ;

(ಬಿ) ವಿಮಾನದ ಚಾಲಕ ತಂಡದ ನಾಯಕ ಅಥವಾ ಇತರೇ ಸದಸ್ಯ;

(ಸಿ) ಮೋಟಾರು ವಾಹನದ ಸ ೦ ಬ ೦ ಧದಲ್ಲಿ ಚಾಲಕ, ಸಹಾಯಕ, ಮೆಕ್ಯಾನಿಕ್, ಕ್ಲೀನರ್ನಾಗಿ ಭರ್ತಿಯಾಗಿರುವ ಅಥವಾ ಯಾವುದೇ ಇತರ ಪದದಲ್ಲಿರುವ ಒಬ್ಬ ವ್ಯಕ್ತಿ.

(ಡಿ) ಕಂಪನಿಯ ಮೂಲಕ ವಿದೇಶಿ ಕೆಲಸಕ್ಕಾಗಿ ನೇಮಕ ಮಾಡಿಕೊಳ್ಳಲಾದ ವ್ಯಕ್ತಿ;

ಮತ್ತು ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಲಾದಂತೆ ಭಾರತದ ಹೊರಗೆ ಯಾವುದೇ ಅಂಥ ಪದದಲ್ಲಿ ಮತ್ತು ಸಂದರ್ಭಾನುಸಾರ, ಭಾರತದಲ್ಲಿ ನೋಂದಾಯಿತವಾದ ಹಡಗು, ವಿಮಾನ ಅಥವಾ ಮೋಟಾರು ವಾಹನದಲ್ಲಿ ಅಥವಾ ಕಂಪನಿಯಲ್ಲಿ ನಿಯೋಜಿತನಾದ ವ್ಯಕ್ತಿ; ಅಥವಾ

(ii) ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಲಾದಂತೆ ಯಾವುದೇ ಅಂಥ ಪದದಲ್ಲಿ (XXX) (XXX) ನಿಯೋಜಿತನಾದ, ಈ ಅಧಿನಿಯಮವನ್ನು ಅಂಗೀಕರಿಸುವ ಮುಂಚೆ ಅಥವಾ ತರುವಾಯ ಉದ್ಯೋಗದ ಕರಾರನ್ನು ಮಾಡಿಕೊಂಡಿರಲಿ ಮತ್ತು ಅಂಥ ಕರಾರನ್ನು ಮೌಖಿಕವಾಗಿ ಅಥವಾ ಲಿಖಿತದಲ್ಲಿ ವ್ಯಕ್ತಪಡಿಸಿರಲಿ ಅಥವಾ ಸೂಚಿಸಿರಲಿ, ಆದರೆ, ಕೇಂದ್ರದ ಸಶಸ್ತ್ರ ಬಲಗಳ ಸದಸ್ಯನ ಪದದಲ್ಲಿ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯು ಒಳಗೊಳ್ಳುವುದಿಲ್ಲ ಮತ್ತು ಗಾಯಗೊಂಡಿರುವ ಯಾರೇ ನೌಕರನಿಗೆ ಸಂಬಂಧಿಸಿದ ಉಲ್ಲೇಖವು, ನೌಕರನು ಮೃತನಾದಲ್ಲಿ ಆತನ ಅವಲಂಬಿತರಿಗೆ ಅಥವಾ ಅವರ ಪೈಕಿ ಯಾರೊಬ್ಬರಿಗೆ ಸಂಬಂಧಿಸಿದ ಉಲ್ಲೇಖವನ್ನು ಒಳಗೊಳ್ಳುತ್ತದೆ." ಇದರಿಂದ, ನಿಯೋಜಕನ ವ್ಯಾಪಾರ ಮತ್ತು ವ್ಯವಹಾರದ ಉದ್ದೇಶಗಳಿಗಾಗಿ ನಿಯೋಜಿತನಾದ ಯಾರೇ ವ್ಯಕ್ತಿಯು, ಕಾರ್ಮಿಕನೆಂದು ಕಂಡುಬರುತ್ತದೆ.ಸ್ಥಳೀಯ ಪ್ರಾಧಿಕಾರ ಅಥವಾ

ಯಾವುದೇ ಇಲಾಖೆಯ (ಸರ್ಕಾರದ ಪರವಾಗಿ ಕಾರನಿರ್ವಹಿಸುವ) ಅಧಿಕಾರಗಳ ಚಲಾವಣೆ ಮತ್ತು ಕರ್ತವ್ಯಗಳ ನಿರ್ವಹಣೆಯು, ಈ ಅಧಿನಿಯಮದ ಉದ್ದೇಶಕ್ಕಾಗಿ, ವಿರುದ್ಧವಾದ ಉದ್ದೇಶ ಕಂಡುಬರದ ಹೊರತು, ಅಂಥ ಪ್ರಾಧಿಕಾರದ ಅಥವಾ ಇಲಾಖೆಯ ವ್ಯಾಪಾರ ಅಥವಾ ವ್ಯವಹಾರವಾಗುತ್ತದೆ ಎಂದು ಭಾವಿಸತಕ್ಕದ್ದು ಎಂಬುದನ್ನು ಅಧಿನಿಯಮದ 2 (2) ನೇ ಪ್ರಕರಣವು ಸ್ಪಷ್ಟಪಡಿಸುತ್ತದೆ.ಹಾಗಾಗಿ, 1 ನೇ ಎದುರುದಾರನ ಸೇವೆಯನ್ನು ಮೇಲ್ಮನವಿದಾರ ಇಲಾಖೆಯ ವ್ಯಾಪಾರ ಅಥವಾ ವ್ಯವಹಾರದ ಉದ್ದೇಶಕ್ಕಾಗಿ ಬಳಸಲಾಗಿದ್ದರೆ, ಆಗ ಆತನು ಅಧಿನಿಯಮದ ಅಡಿಯಲ್ಲಿ ಪರಿಭಾಷಿಸಿದ ಕಾರ್ಮಿಕ ಪದದ ವ್ಯಾಪ್ತಿಯೊಳಗೆ ಬರುವನು.ಇಲಾಖೆಯಲ್ಲಿ ಚಾಲಕರ ಅಗತ್ಯವಿದ್ದಾಗಲೆಲ್ಲಾ 1ನೇ ಎದುರುದಾರನ ಸೇವೆಯನ್ನು ಬಳಸಿಕೊಳ್ಳಲಾಗಿತ್ತು.ವಿವಿಧ ದಿನಾಂಕಗಳಂದು ಆತನ ಸೇವೆಯನ್ನು ಬಳಸಿಕೊಳ್ಳಲಾಗಿದೆ.ಅಧಿನಿಯಮದ 2 ( 1) (ಎನ್) ಪ್ರಕರಣದೊಂದಿಗೆ ಓದಲಾಗುವ ಅಧಿನಿಯಮದ 2 ( 2) ನೇ ಪ್ರಕರಣವನ್ನು ಗಮನಿಸಿದ ಸಂದರ್ಭದಲ್ಲಿ, ಮೇಲ್ಮನವಿದಾರ ಇಲಾಖೆಯ ವ್ಯಾಪಾರ ಅಥವಾ ವ್ಯವಹಾರಕ್ಕೆ 1 ನೇ ಪ್ರತಿವಾದಿಯ ಸೇವೆಯನ್ನು ಬಳಸಿಕೊಳ್ಳಲಾಗಿತ್ತು ಹಾಗಿರುವಾಗ, ಅಧಿನಿಯಮದ 2 (1) (ಎನ್) ಪ್ರಕರಣದ ಅರ್ಥವ್ಯಾಪ್ತಿಯೊಳಗೆ 1ನೇ ಪ್ರತಿವಾದಿಯು ಕಾರ್ಮಿಕನಾಗಿದ್ದನು.ಇದುವೇ ಏಕಮಾತ್ರ ಕಾನೂನಿನ ಮುಖ್ಯ ಪ್ರಶ್ನೆಯಾಗಿದೆ.ಅಧಿನಿಯಮದ 2 (1) (ಎನ್) ಪ್ರಕರಣದ ಓದುವಿಕೆಯಿಂದ, 1 ನೇ ಪ್ರತಿವಾದಿಯು ಕಾರ್ಮಿಕನಾಗಿದ್ದನು ಮತ್ತು ಆತನ ಪರವಾಗಿ ನೀಡಿದ ಮೊತ್ತವನ್ನು ವಿವಾದಗೊಳಿಸಲಾಗುವುದಿಲ್ಲ ಅಥವಾ ಮೇಲ್ಮನವಿಯಲ್ಲಿ ಪ್ರಶ್ನಿಸಲಾಗುವುದಿಲ್ಲ ಮತ್ತು ಇನ್ನಾವುದೇ ಕಾನೂನಿನ ಪ್ರಶ್ನೆಗೆ ಮೇಲ್ಮನವಿಯಲ್ಲಿ ಇರುವ ಈ ಒಂದು ಮುಖ್ಯ ಪ್ರಶ್ನೆಯು ಕಡಿಮೆಯಲ್ಲ.

27. ಮೇಲೆ ಹೇಳಿದ ಕಾರಣಗಳ ಹಿನ್ನೆಲೆಯಲ್ಲಿ, ಮಂಡಿಸಲಾದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನಾಧರಿಸಿ, ಅಪಘಾತವಾದ ದಿನಾಂಕದಿಂದ ಹಣ ವಸೂಲಾಗುವ ದಿನಾಂಕದವರೆಗೆ ವಾರ್ಷಿಕ ಶೇಕಡಾ 12 ರ ದರದಲ್ಲಿ ಬಡ್ಡಿ ಸಹಿತವಾಗಿ 8,42,000/- ರೂ.ಗಳ ಪರಿಹಾರವನ್ನು ನೀಡುವಲ್ಲಿ ನ್ಯಾಯಾಧಿಕರಣವು ನ್ಯಾಯಯುತವಾಗಿದೆ ಎಂದು ಸಕಾರಾತ್ಮಕವಾಗಿ ಅಭಿಪ್ರಾಯಪಡುವ ಮೂಲಕ, ಪ್ರಸ್ತುತ ಮೇಲ್ಮನವಿಯಲ್ಲಿ ಎತ್ತಿದ ಕಾನೂನಿನ ಪ್ರಮುಖ ಪ್ರಶ್ನೆಗೆ ಉತ್ತರಿಸಲಾಗಿದೆ.ಇದು ಕಾನೂನಿಗೆ ಅನುಗುಣವಾಗಿದೆ.ನೌಕರರ ಪರಿಹಾರ ಅಧಿನಿಯಮದ 30(1)ನೇ ಪ್ರಕರಣದ ಉಪಬಂಧಗಳ ಮೇರೆಗಿನ ಅಧಿಕಾರಗಳನ್ನು ಚಲಾಯಿಸಿ ಆಯುಕ್ತರು/ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪಿನಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಕಾರಣವನ್ನು ಮೇಲ್ಮನವಿದಾರರು ಸಾಧಿಸಿರುವುದಿಲ್ಲ.

ತದನುಸಾರವಾಗಿ, ಅಪೀಲನ್ನು ವಜಾಗೊಳಿಸಲಾಗಿದೆ.

ವಿಮಾ ಕಂಪನಿಯು ಈ ನ್ಯಾಯಾಲಯದ ಮುಂದೆ ಯಾವುದೇ ಮೊತ್ತವನ್ನು ಠೇವಣಿ ಇರಿಸಿದ್ದರೆ, ಅದನ್ನು ಸಂಬಂಧಪಟ್ಟ ನ್ಯಾಯಾಧಿಕರಣಕ್ಕೆ ಈ ಕೂಡಲೇ ವರ್ಗಾಯಿಸತಕ್ಕದ್ದು.

ತದನುಸಾರವಾಗಿ ಆದೇಶ ಹೊರಡಿಸಲಾಗಿದೆ.